RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೇಶಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ಅನ್ನದಾತರ ಪರ ವಿಶೇಷ ಅಧಿವೇಶನ ವಿಫಲ: ನಡಹಳ್ಳಿ 2

ಸರ್ಕಾರವೇ ಜನರ ಬಾಗಿಲಿಗೆ: ಗೋಠೆಯಲ್ಲಿ ಪ್ರಜಾ ಸೇವಾ ಆಂದೋಲನಕ್ಕೆ ಚಾಲನೆ 3

ಮೂರ್ತಿ ತೆರವಿಗೆ ಕುಮ್ಮಕ್ಕು ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಿ: ಪ್ರಭು ಚವಡಿ 4

ಸಂಪುಟ(Volume): 1 ಸಂಚಿಕೆ (Issue): 78 ● ಪುಟ (Page): 4 ● ದರ: Rs. 4 ಮಂಗಳವಾರ 29 ಸೆಪ್ಟೆಂಬರ್ 2026 ● 29 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

## ಮರು ಗೆಲುವಿನ ಹಂಬಲದಲ್ಲಿ ಸಂಕನೂರ, ಬದಲಾವಣೆಯ ನಿರೀಕ್ಷೆಯಲ್ಲಿ ಲಿಂಬಿಕಾಯಿ

ಮುತ್ತು ಗೋಸಲ ಗದಗ

ಉತ್ತರ ಕರ್ನಾಟಕದ ರಾಜಕೀಯ ಶಕ್ತಿ ಕೇಂದ್ರಗಳಾದ ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡ 'ಪಶ್ಚಿಮ ಪದವೀಧರ ಕ್ಷೇತ್ರ'ದಲ್ಲಿ ಚುನಾವಣಾ ಕಾವು ದಿನದಿಂದ ದಿನಕ್ಕೆ ಏರುತ್ತಿದೆ. ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿರುವ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ ಹಾಗೂ ಪ್ರಬಲ ಸವಾಲೊಡ್ಡಿರುವ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ವಿಧಾನ ಪರಿಷತ್ ಸದಸ್ಯ ಮೋಹನ್ ಲಿಂಬಿಕಾಯಿ ನಡುವೆ ನೇರ ಹಾಗೂ ಕೌತುಕದ ಸ್ಪರ್ಧೆ ಏರ್ಪಟ್ಟಿದೆ.

ಸಂಕನೂರ 'ಅನುಭವ'ದ ಬಲ, ಲಿಂಬಿಕಾಯಿ 'ಬದಲಾವಣೆ'ಯ ಭರವಸೆ



ಈ ಕ್ಷೇತ್ರದಿಂದ ಈಗಾಗಲೇ ಎರಡು ಬಾರಿ ಆಯ್ಕೆಯಾಗಿರುವ ಎಸ್.ವಿ. ಸಂಕನೂರ ಅವರು ತಮ್ಮ ಸುದೀರ್ಘ ಅನುಭವ, ಶಿಕ್ಷಕರು ಮತ್ತು ಪದವೀಧರರ ಪರವಾಗಿ ಸಭೆಯಲ್ಲಿ ಧ್ವನಿ ಎತ್ತಿದ ದಾಖಲೆಗಳನ್ನು ಮುಂದಿಟ್ಟುಕೊಂಡು ಮೂರನೇ ಬಾರಿಗೆ ಜನಾದೇಶ ಕೋರುತ್ತಿದ್ದಾರೆ. ಇನ್ನೊಂದೆಡೆ, ಮಾಜಿ ಎಂಎಲ್‌ಸಿ ಮೋಹನ್ ಲಿಂಬಿಕಾಯಿ ಅವರು ಕಾಂಗ್ರೆಸ್ ಸಂಘಟನಾ ಬಲದೊಂದಿಗೆ ಕಣಕ್ಕಿಳಿದಿದ್ದು, ಕ್ಷೇತ್ರಕ್ಕೆ ಹೊಸ ದೃಷ್ಟಿಕೋನ ಮತ್ತು ಸಕ್ರಿಯ ಪ್ರತಿನಿಧಿತ್ವದ ಅಗತ್ಯವಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. "ಪಾರದರ್ಶಕತೆ, ಸುಲಭ ಸಂಪರ್ಕಕ್ಕೆ ಸಿಗುವ ಜನಪ್ರತಿನಿಧಿತ್ವ ಹಾಗೂ ಯುವಜನರ ಭವಿಷ್ಯಕ್ಕೆ ಭದ್ರತೆ ನೀಡುವುದೇ ನನ್ನ ಮೊದಲ ಆದ್ಯತೆ" ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಚುನಾವಣಾ ಕಣದಲ್ಲಿ ಚರ್ಚೆಯಾಗುತ್ತಿರುವ ಈ ಭಾರಿ ಚುನಾವಣೆ ಪ್ರಮುಖ ವಿಷಯಗಳೆಂದರೆ. ವಿದ್ಯಾವಂತ ಯುವಜನರಿಗೆ ಉದ್ಯೋಗಾವಕಾಶ, ಡಿಜಿಟಲ್ ತರಬೇತಿ ಮತ್ತು ಉದ್ಯಮಶೀಲತೆಗೆ ಪ್ರೋತ್ಸಾಹ. ಗುಣಮಟ್ಟದ ಶಿಕ್ಷಣ, ಸಂಶೋಧನೆಗೆ ಬೆಂಬಲ ಮತ್ತು ವೃತ್ತಿಪರರ ಹಿತರಕ್ಷಣೆ. ನಾಲ್ಕು ಜಿಲ್ಲೆಗಳ ಮೂಲಸೌಕರ್ಯ ವೃದ್ಧಿ ಮತ್ತು ಶಿಕ್ಷಕರು-ಪದವೀಧರರ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಎರಡೂ ಪಕ್ಷಗಳ ಪ್ರಚಾರ ಬಿರುಸಿನಿಂದ ಸಾಗುತ್ತಿದ್ದು, ನಾಲ್ಕು ಜಿಲ್ಲೆಗಳ ಶಿಕ್ಷಕರು ಹಾಗೂ ಪದವೀಧರ ಮತದಾರರು ಯಾರ ಪರ ಒಲವು ತೋರಲಿದ್ದಾರೆ ಎಂಬುದು ಕುತೂಹಲ ಮೂಡಿಸಿದೆ. ಸಂಕನೂರ ಅವರ 'ಹ್ಯಾಟ್ರಿಕ್' ಓಟಕ್ಕೆ ಲಿಂಬಿಕಾಯಿ ಅವರು ಯಾವ ಮಟ್ಟಿನ ತಡೆ ಒಡ್ಡಲಿದ್ದಾರೆ ಎಂಬುದನ್ನು ಮುಂಬರುವ ಫಲಿತಾಂಶವೇ ನಿರ್ಣಯಿಸಲಿದೆ

## ಗ್ಯಾರಂಟಿ ಸರ್ಕಾರಕ್ಕೆ ತೊಂದರೆ ನಿಜ: ಸಿಎಂ ಡಿ.ಕೆ. ಶಿವಕುಮಾರ್

ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:

ಗ್ಯಾರಂಟಿ ಯೋಜನೆಗಳಿಂದ ಸರ್ಕಾರಕ್ಕೆ ಒಂದಷ್ಟು ತೊಂದರೆಯಾಗಿರುವುದು ನಿಜ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಖಾಸಗಿ ಚಾನೆಲ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಅವರು, "ತೊಂದರೆಯಾಗಿಲ್ಲ ಎಂದು ನಾನು ಹೇಳುವುದಿಲ್ಲ. ಹಾಗಾಗಿಯೇ ಅರ್ಹರಿಗೆ ಮಾತ್ರ ಈ ಯೋಜನೆಗಳು ಸಿಗಬೇಕು ಎಂಬ ಉದ್ದೇಶದಿಂದ ಮರು ಪರಿಶೀಲನೆ ಮಾಡಲಾಗುತ್ತಿದೆ" ಎಂದು ಹೇಳಿದ್ದಾರೆ.

"5 ಗ್ಯಾರಂಟಿ ಯೋಜನೆಗಳಿಗೆ ನಾವು ಬರೋಬ್ಬರಿ 52 ಸಾವಿರ ಕೋಟಿ ರು.ಗಳನ್ನು ಖರ್ಚು ಮಾಡುತ್ತಿದ್ದೇವೆ. ಇದರಿಂದ ಸರ್ಕಾರಕ್ಕೆ ಎಷ್ಟು ತೊಂದರೆಯಾಗಿದೆ ಎನ್ನುವುದನ್ನು ಮೌಲ್ಯಮಾಪನ ಮಾಡಬೇಕಾಗುತ್ತದೆ. ಅರ್ಹರಿಗೆ ಮಾತ್ರ ಯೋಜನೆಗಳ ಫಲ ದೊರೆಯಬೇಕು. ಜೊತೆಗೆ ಇದರಿಂದ ಸರ್ಕಾರಕ್ಕೆ ಎಷ್ಟು ಹಣ ಉಳಿತಾಯವಾಗುತ್ತದೋ ಆಗಲಿ" ಎಂದು ಅವರು ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಬಗ್ಗೆ ಮಾಹಿತಿ ನೀಡಿದ್ದಾರೆ.

ನಮ್ಮ ರಾಜ್ಯದ ಮತದಾರರಿಗೆ ಮಾತ್ರ ಗ್ಯಾರಂಟಿ ಸೌಲಭ್ಯ ಹೊರ ರಾಜ್ಯದವರಿಗೆ ಯೋಜನೆಗಳ ಸೌಲಭ್ಯ ನೀಡುವ ಕುರಿತು ಮಾತನಾಡಿದ ಅವರು, "ನನ್ನ ಜೊತೆ ಬಂದಿದ್ದ ಕಾರ್ಯದರ್ಶಿ ಅವರು ಗೃಹಜ್ಯೋತಿ ಯೋಜನೆ ಪರಿಷ್ಕರಣೆ ಬಗ್ಗೆ ಹೇಳುತ್ತಿದ್ದರು. ಹೊರ ರಾಜ್ಯದಿಂದ ಬಂದು ಕರ್ನಾಟಕದಲ್ಲಿ ನೆಲೆಸಿರುವವರಿಗೆ ನಾವ್ಯಾಕೆ ಉಚಿತ ಯೋಜನೆ ನೀಡಬೇಕು? ನಮ್ಮ ರಾಜ್ಯದ ಮತದಾರರಿಗೆ ಮಾತ್ರ ಗ್ಯಾರಂಟಿ ಸೌಲಭ್ಯಗಳನ್ನು ನೀಡುವ ಕುರಿತು ಅರ್ಜಿ ಪರಿಷ್ಕರಣೆ ಮಾಡಲಾಗುತ್ತಿದೆ" ಎಂದಿದ್ದಾರೆ.

"ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯಲ್ಲೂ ಅಷ್ಟೆ. ಬೇರೆ ರಾಜ್ಯಗಳ ಸಾಕಷ್ಟು ಮಂದಿ ಉದ್ಯೋಗ, ವಿದ್ಯಾಭ್ಯಾಸ ಮತ್ತಿತರ ಕಾರಣಗಳಿಂದ ನಮ್ಮ ರಾಜ್ಯಕ್ಕೆ ಬಂದು ನೆಲೆಸಿದ್ದಾರೆ. ಅವರು ತಮ್ಮ ತಮ್ಮ ರಾಜ್ಯಕ್ಕೆ ಹೋಗುವಾಗ ಮತ್ತು ಬರುವಾಗ ಕರ್ನಾಟಕದ ಗಡಿ ಪ್ರವೇಶಿಸುತ್ತಿದ್ದಂತೆ ಶಕ್ತಿ ಯೋಜನೆಯ ಉಪಯೋಗ ಪಡೆದು ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಅದನ್ನು ತಡೆಯಲು ನಮ್ಮ ರಾಜ್ಯದ ಮತದಾರರಿಗೆ ಮಾತ್ರ ಉಚಿತ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್ ನೀಡಲಾಗುವುದು. ಇದಕ್ಕೆ 100 ಕೋಟಿ ರು. ವೆಚ್ಚವಾಗಲಿದ್ದು, ಸ್ಥಳೀಯರಲ್ಲದವರಿಗೆ ಯೋಜನೆಯ ಸೌಲಭ್ಯ ತಡೆಯುವುದರಿಂದ ಅನುದಾನ ಉಳಿಯುತ್ತದೆ. ಎಷ್ಟು ಉಳಿಯುತ್ತದೋ ಉಳಿಯಲಿ, ಪ್ರಸ್ತುತ ಎಲ್ಲಾ ಲೆಕ್ಕಾಚಾರ ನಡೆಯುತ್ತಿದೆ" ಎಂದು ವಿವರಿಸಿದರು.



### ಸಿದ್ದರಾಮಯ್ಯ ನನ್ನ ಜೊತೆ ನಿಲ್ಲುತ್ತಾರೆ

**ಈ ನಿರ್ಧಾರಕ್ಕೆ ಸಿದ್ದರಾಮಯ್ಯ ಅವರ ಬೆಂಬಲ ಇದೆಯಾ ಎಂಬ ಪ್ರಶ್ನೆಗೆ, "ಸಿದ್ದರಾಮಯ್ಯ ಅವರು ನನ್ನ ಜೊತೆ ನಿಲ್ಲುತ್ತಾರೆ. ಏಕೆಂದರೆ ನಾನು ಅವರ ಜೊತೆ ಬಂಡೆಯಂತೆ ನಿಂತಿದ್ದೇನೆ. ನನ್ನ ಜೀವನದಲ್ಲೇ ಯಾರಿಗೂ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿಲ್ಲ. ಹಿಂದೆ ಬಂಗಾರಪ್ಪ, ಎಸ್.ಎಂ.ಕೃಷ್ಣ ಅವರ ಜೊತೆ ಇದ್ದೆ. ಈಗ ಸಿದ್ದರಾಮಯ್ಯ ಅವರ ಜೊತೆ ಇದ್ದೇನೆ. ಹಿಂದೆ ಕುಮಾರಸ್ವಾಮಿ ಅವರ ಜೊತೆಗೂ ನಿಂತಿದ್ದೆ, ಅವರು (ಎಚ್‌ಡಿಕೆ) ಇಲ್ಲ ಎಂದು ಹೇಳಬಹುದು" ಎಂದು ಹೇಳಿದರು.**

ಹೈಕಮಾಂಡ್‌ಗೆ ನನ್ನ ಮೇಲೆ ವಿಶ್ವಾಸವಿದೆ

ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ವಿಚಾರದಲ್ಲಿ ಹೈಕಮಾಂಡ್ ಜೊತೆಗಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿ, "ನಮ್ಮ ಪಕ್ಷದ ವರಿಷ್ಠರಿಗೆ ಹಾಗೂ ಹೈಕಮಾಂಡ್ ನಾಯಕರಿಗೆ ನನ್ನ ಮೇಲೆ ಸಂಪೂರ್ಣ ವಿಶ್ವಾಸವಿದೆ. ಅವರು ನನ್ನಿಂದ ಉತ್ತಮ ಆಡಳಿತ ನಿರೀಕ್ಷೆ ಮಾಡಿದ್ದು, ಅದನ್ನು ನಾನು ಕೊಟ್ಟೇ ಕೊಡುತ್ತೇನೆ. 2028ಕ್ಕೆ ಮತ್ತೆ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದೇ ತರುತ್ತೇನೆ ಎಂಬ ನಂಬಿಕೆ ಅವರಲ್ಲಿದ್ದು, ಅದನ್ನು ಉಳಿಸಿಕೊಳ್ಳುತ್ತೇನೆ" ಎಂದರು.

## ಡಿಕೆಶಿ ದೆಹಲಿ ಭೇಟಿ, ಫಲ ನೀಡುತ್ತಾ?

**ಬೆಂಗಳೂರು:** ಸಿಎಂ ಡಿಕೆ ಶಿವಕುಮಾರ್ ಅವರ ಸಂಪುಟದಲ್ಲಿ ಎರಡು ಸ್ಥಾನ ಖಾಲಿ ಇದೆ. ಅದರಲ್ಲೂ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ಸಿಗದೆ ಇರುವುದು ಚರ್ಚೆಗೆ ಎಡೆಮಾಡಿಕೊಟ್ಟಿದೆ. ಈ ನಡುವೆ ಡಿಕೆ ಶಿವಕುಮಾರ್ ಹಾಗೂ ಸಿದ್ದರಾಮಯ್ಯ ದೆಹಲಿ ಪ್ರಯಾಣ ಮಾಡಿದ್ದಾರೆ. ದೆಹಲಿಯಲ್ಲಿ ನಡೆಯುತ್ತಿರುವ ಸಿಡಬ್ಲ್ಯುಸಿ ಸಭೆಯಲ್ಲಿ ಅವರು ಭಾಗಿಯಾಗಲಿದ್ದಾರೆ. ಈ ಬಳಿಕ ವರಿಷ್ಠರ ಜೊತೆಗೆ ಮಾತುಕತೆ ನಡೆಸಲಿದ್ದಾರೆ. ಈ ವೇಳೆ ಸಂಪುಟ ವಿಸ್ತರಣೆಯ ಬಗ್ಗೆ ಚರ್ಚೆ ಆಗುವ ಸಾಧ್ಯತೆ ಹೆಚ್ಚಾಗಿದೆ.



ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಹಿನ್ನೆಲೆಯಲ್ಲಿ ದೆಹಲಿಗೆ ಸಿಎಂ, ಡಿ.ಕೆ ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಸೋಮವಾರ ಬೆಳಗ್ಗೆ 10 ಗಂಟೆಗೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿ ಪ್ರಯಾಣ ಮಾಡಿದ್ದಾರೆ. ದೆಹಲಿಯಲ್ಲಿ ಕೇಂದ್ರದ ಸಚಿವರನ್ನು ಸಿಎಂ ಡಿ.ಕೆ ಶಿವಕುಮಾರ್ ಭೇಟಿ ಮಾಡಲಿದ್ದಾರೆ. ಈ ವೇಳೆ ಬರ ಪರಿಹಾರದ ಬಗ್ಗೆ ಮತ್ತು ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ರಾತ್ರಿ ದೆಹಲಿಯಲ್ಲೇ ವಾಸ್ತವ್ಯ ಹೂಡಲಿರುವ ಸಿಎಂ ಡಿ.ಕೆ ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಎಸ್‌ಐಆರ್ ವಿರುದ್ಧದ ಹೋರಾಟದ ರೂಪುರೇಷೆ ಕುರಿತು ಚರ್ಚೆ ನಡೆಯಲಿದೆ. ದೆಹಲಿ ಭೇಟಿ ವೇಳೆ ಹೈಕಮಾಂಡ್ ನಾಯಕರನ್ನ ಪ್ರತ್ಯೇಕವಾಗಿ ಭೇಟಿ ಮಾಡಲಿರುವ ಸಿಎಂ, ಮಾಜಿ ಸಿಎಂ ಇದೇ ಸಂದರ್ಭದಲ್ಲಿ ಸಂಪುಟ ವಿಸ್ತರಣೆಯ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ ಇದೆ.

**2 ಸ್ಥಾನ ಭರ್ತಿಗೆ ಚರ್ಚೆ:** ಸದ್ಯ ಬಿ ನಾಗೇಂದ್ರ ಅವರ ರಾಜೀನಾಮೆಯಿಂದ ತೆರವಾದ ಸ್ಥಾನ ಸೇರಿದಂತೆ ಖಾಲಿ ಇರುವ ಎರಡು ಸ್ಥಾನಗಳ ಭರ್ತಿ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ವರಿಷ್ಠರ ಜೊತೆಗೆ ಡಿಕೆಶಿ ಮತ್ತು ಸಿದ್ದರಾಮಯ್ಯ ಅವರು ಮಾತುಕತೆ ನಡೆಸಲಿದ್ದಾರೆ. ಜೊತೆಗೆ ವಿಧಾನಪರಿಷತ್ ಚುನಾವಣೆ, ನಾಮನಿರ್ದೇಶನ ಕುರಿತು ಮಾತುಕತೆ ನಡೆಯಲಿದೆ.

ಸಂಪುಟದಲ್ಲಿ ಒಂದು ಸ್ಥಾನವನ್ನು ಮಹಿಳೆಯರಿಗೆ ನೀಡಬೇಕಾಗಿದೆ. ಆದರೆ, ಕೆಲವೊಂದು ಗೊಂದಲಗಳ ಕಾರಣದಿಂದಾಗಿ ಅದು ಸಾಧ್ಯವಾಗಿಲ್ಲ. ಹೀಗಾಗಿ ಸಂಸದ ಇ ತುಕಾರಾಂ ಅವರ ಪತ್ನಿಗೆ ಅನ್ನಪೂರ್ಣ ಅವರಿಗೆ ಸಂಪುಟದಲ್ಲಿ ಸ್ಥಾನ ಸಿಗುವ ಸಾಧ್ಯತೆ ಇದೆ. ಮತ್ತೊಂದು ಸ್ಥಾನವನ್ನು ಯಾರಿಗೆ ನೀಡಲಾಗುತ್ತದೆ ಎಂಬುವುದು ಸದ್ಯಕ್ಕೆ ಕುತೂಹಲ ಕೆರಳಿಸಿದೆ.

**ನಿಗಮ ಮಂಡಳಿ ನೇಮಕಾತಿ ಚರ್ಚೆ:** ಅಸಮಾಧಾನಿತ ಶಾಸಕರಿಗೆ ನಿಗಮ, ಮಂಡಳಿ ನೇಮಕ, ಕಾರ್ಯಕರ್ತರಿಗೆ ಆದ್ಯತೆ ನೀಡುವ ಸಂಬಂಧ ಪಟ್ಟಿಯನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ. ಅಲ್ಲದೆ, ಇದೇ ವೇಳೆ ರಾಜಕೀಯ ವ್ಯವಹಾರಗಳ ಸಮಿತಿ ರಚಿಸುವ ಕುರಿತು ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸಿಎಂ ಮತ್ತು ಮಾಜಿ ಸಿಎಂ ದೆಹಲಿ ಭೇಟಿ ಮಹತ್ವ ಪಡೆದುಕೊಂಡಿದೆ.

## ಆಹ್ವಾನ ತಿರಸ್ಕಾರ ವದಂತಿ ತಳ್ಳಿಹಾಕಿದ ಗವಿಮಠ: ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರಿಂದ ಆಹ್ವಾನ ಸ್ವೀಕಾರ

ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ:

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ-2026ರ ಉದ್ಘಾಟನಾ ಆಹ್ವಾನವನ್ನು ಕೊಪ್ಪಳದ ಗವಿಮಠದ ಮಹಾಸಂಸ್ಥಾನದ ಶ್ರೀಗಳಾದ ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರು ತಿರಸ್ಕರಿಸಿದ್ದಾರೆ ಎಂಬ ವದಂತಿಗಳನ್ನು ಗವಿಮಠದ ಮೂಲಗಳು ಅಧಿಕೃತವಾಗಿ ತಳ್ಳಿಹಾಕಿವೆ.

ಶ್ರೀಗಳು ದಸರಾ ಉದ್ಘಾಟನೆಯ ಆಹ್ವಾನವನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದ್ದಾರೆ ಎಂದು ಗವಿಮಠ ಸ್ಪಷ್ಟಪಡಿಸಿದೆ.

ಕಳೆದ ಒಂದು ವಾರದಿಂದ ಮೌನ ವ್ರತದಲ್ಲಿದ್ದ ಸ್ವಾಮೀಜಿಯವರು ಶನಿವಾರ ಮಧ್ಯಾಹ್ನ ತಮ್ಮ ಮೌನ ವ್ರತವನ್ನು ಅಂತ್ಯಗೊಳಿಸಿದ್ದಾರೆ. ಈ ಸಂದರ್ಭದಲ್ಲಿ ಸ್ವಾಮೀಜಿಯವರ ವಿರೋಧಿಗಳು ಜನರಲ್ಲಿ ಗೊಂದಲ ಮೂಡಿಸುವ ಉದ್ದೇಶದಿಂದ ಇಂತಹ ವದಂತಿಗಳನ್ನು ಹರಡುತ್ತಿದ್ದಾರೆ ಎಂದು ಮಠ ತಿಳಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೈಸೂರು ದಸರಾ ಉತ್ಸವದ ಉದ್ಘಾಟನೆಗೆ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಯವರನ್ನು ಆಹ್ವಾನಿಸಿದ್ದು, ಸ್ವಾಮೀಜಿಯವರು ಈ ಆಹ್ವಾನವನ್ನು ಸ್ವೀಕರಿಸಿದ್ದಾರೆ. ಗವಿಮಠದ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಈ ಹಿಂದೆ ಹಲವು ಗಣ್ಯರು ಆಗಮಿಸಿದ್ದರು ಎಂದೂ ಮಠದಿಂದ ಮಾಹಿತಿ ಒದಗಿದೆ .



## ಸೀಕ್ರೆಟ್ ದಾಖಲೆ ಬಿಡುಗಡೆಗೆ ಕೌಂಟ್'ಡೌನ್

**ಬೆಂಗಳೂರು:** ಅಮೆರಿಕ ಪ್ರವಾಸದಲ್ಲಿದ್ದಾಗ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಬೆಂಗಳೂರಿಗೆ ವಾಪಸ್ ಆಗುತ್ತಿದ್ದಂತೆಯೇ, ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಲಿದ್ದೇನೆ. ಅದು ರಾಜ್ಯ ರಾಜಕಾರಣದಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸಲಿದೆ ಎಂದು ಹೇಳಿದ್ದರು. ಅದಾದ ನಂತರ, ಸೂಕ್ತ ಸಮಯದಲ್ಲಿ ದಾಖಲೆಗಳನ್ನು ಜನರ ಮುಂದೆ ಇಡಲಿದ್ದೇನೆ ಎಂದು ಹೇಳಿದ್ದರು. ಈಗ, ಅದಕ್ಕೆ ಸಮಯ ಕೂಡಿಬಂದಿದೆ.

ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರು ಹಾಗೂ ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷರಾದ ಎಚ್.ಡಿ.ಕುಮಾರಸ್ವಾಮಿ ಅವರು, ನಗರದ ತುಮಕೂರು ರಸ್ತೆಯ ಯಶವಂತಪುರದಲ್ಲಿರುವ ಹೋಟೆಲ್ ತಾಜ್'ನಲ್ಲಿ ಬೆಳಗ್ಗೆ ಹನ್ನೊಂದು ಗಂಟೆಗೆ ಮಾಧ್ಯಮಗೋಷ್ಠಿಯನ್ನು ಕರೆದಿದ್ದಾರೆ. ಅತ್ಯಂತ ಮಹತ್ವದ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಕುಮಾರಸ್ವಾಮಿ ಮಾತನಾಡಲಿದ್ದಾರೆ. ಈ ಸಂದರ್ಭದಲ್ಲಿ ದಾಖಲೆಗಳ ಸಮೇತ ಕೆಲ ಮಹತ್ವದ ಸಂಗತಿಗಳನ್ನು ಹಂಚಿಕೊಳ್ಳಲಿದ್ದಾರೆ ಎಂದು, ಮಾಧ್ಯಮದವರನ್ನು ಆಹ್ವಾನಿಸಿದ್ದಾರೆ.



**ಅಕ್ಟೋಬರ್ ಎರಡರಂದು ಕುಮಾರಸ್ವಾಮಿ ನೈಸ್ ಬಾಧಿತ ಗ್ರಾಮಗಳಿಗೆ ಭೇಟಿ:** ನೈಸ್ ಯೋಜನೆಯ ಅಕ್ರಮಗಳ ಬಗ್ಗೆ ನನ್ನ ಹೋರಾಟ ಮುಂದುವರಿಯಲಿದೆ. ನೈಸ್ ಯೋಜನೆಯ ಬಾಧಿತ ಗ್ರಾಮಗಳಿಗೆ ಅಕ್ಟೋಬರ್ 2ರಿಂದ ಭೇಟಿ ನೀಡುವುದಾಗಿ ಘೋಷಿಸಿದ್ದರು. ಮಂಗಳವಾರ (ಸೆ. 29) ಬೆಂಗಳೂರಿನಲ್ಲಿ ಮಾಧ್ಯಮಗೋಷ್ಠಿಯನ್ನು ಕರೆದು ನೈಸ್ ಯೋಜನೆ ಕುರಿತ ಮತ್ತಷ್ಟು ದಾಖಲೆಗಳನ್ನು ಬಿಡುಗಡೆ ಮಾಡುವುದಾಗಿ ಕೇಂದ್ರ ಸಚಿವರು, ಒಂದು ದಿನದ ಹಿಂದೆಯೇ ತಿಳಿಸಿದ್ದರು. ಆದರೆ, ಸ್ಥಳ ಮತ್ತು ಸಮಯ ನಿಗದಿಯಾಗಿರಲಿಲ್ಲ.

ನೈಸ್ ಕಂಪನಿ ವಿರುದ್ಧ ನನ್ನ ಹೋರಾಟ ನಿಲ್ಲುವುದಿಲ್ಲ - ಕುಮಾರಸ್ವಾಮಿ "ನೈಸ್ ಕಂಪನಿ ಹಾಗೂ ಅದು ಎಸಗಿರುವ ಅಕ್ರಮಗಳ ವಿರುದ್ಧ ನನ್ನ ಹೋರಾಟ ನಿಲ್ಲುವುದಿಲ್ಲ. ಕನಿಷ್ಠ ಐವತ್ತು ಹಳ್ಳಿಗಳಿಗೆ ಭೇಟಿ ನೀಡುತ್ತೇನೆ. ಆ ಕಂಪನಿಯ ಯೋಜನೆಗಾಗಿ ಭೂಮಿ ಕಳೆದುಕೊಂಡ ಸಾರ್ವಜನಿಕರನ್ನು ಭೇಟಿಯಾಗುತ್ತೇನೆ. ಜನರ ಜತೆ ಸೇರಿಕೊಂಡು ನಾನು ಹೋರಾಟ ಮಾಡುತ್ತೇನೆ. ಕೊನೆಗೆ ಈ ಕಂಪನಿಗೆ ಯಾವ ರೀತಿ ಪಾಠ ಕಲಿಸಬೇಕು ಎಂದು ಜನರೇ ತೀರ್ಮಾನ ಮಾಡಲಿ" ಎಂದು ಕುಮಾರಸ್ವಾಮಿ ಹೇಳಿದ್ದರು.

ದೇವೆಗೌಡರನ್ನು ಹಂಗಿಸಿದರು, ನಿಮ್ಮ ಆಶೀರ್ವಾದದಿಂದ ಕೇಂದ್ರದಲ್ಲಿ ಸಚಿವನಾದೆ ದೇವೇಗೌಡರ ಕಾಲ ಮುಗಿದೇ ಹೋಯ್ತು ಎಂದು ಕೆಲವರು ಹಂಗಿಸಿದರು. ನಿಮ್ಮ ಆಶೀರ್ವಾದದಿಂದ ದೆಹಲಿಯಲ್ಲಿ ಸಚಿವನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ದೇವೇಗೌಡರು ವ್ಹೀಲ್ ಚೇರ್ ನಲ್ಲಿ ಓಡಾಡಬೇಕು, ಡಯಾಲಿಸೀಸ್ ಗೆ ಒಳಗಾಗಬೇಕು. ಈಗಲೂ ಜನರ ಪರವಾಗಿ ಹೋರಾಟ ಮಾಡುವೆ ಎನ್ನುತ್ತಾರೆ ಎಂದು ತಂದೆಯವರ ಬಗ್ಗೆ ಹೇಳಿಕೆಯನ್ನು ನೀಡಿದ್ದಾರೆ.

ಮಾದಾವರ ಗ್ರಾಮದಲ್ಲಿ ನೈಸ್ ಇಂಟಿಗ್ರೇಟೆಡ್ ರಸ್ತೆಯ ಬಾಧಿತ ಐದು ಗ್ರಾಮಗಳ ಜನರಿಂದ ಅಹವಾಲು ಸ್ವೀಕರಿಸಿದ ಸಂದರ್ಭದಲ್ಲಿ ಮಾತನಾಡಿದ ಕುಮಾರಸ್ವಾಮಿ, ನಾನು ನಿಮಗೆ ಒಂದು ದಿನ ಬಂದು ಸಮಾಧಾನ ಮಾಡಿ ಹೋಗಲು ಬಂದಿಲ್ಲ. ಇದಕ್ಕೆ ತಾರ್ಕಿಕ ಅಂತ್ಯ ಕಾಣಿಸಬೇಕು. ಜನರ ಜತೆಗೆ ನಿಂತು ಹೋರಾಟ ಮಾಡುತ್ತೇನೆ. ಮಾದಾವರದಿಂದ ಎಲೆಕ್ಟ್ರಾನಿಕ್ ಸಿಟಿವರೆಗೂ ನಾನು ಎಲ್ಲಾ ಹಳ್ಳಿಗಳಿಗೂ ಭೇಟಿ ನೀಡುತ್ತೇನೆ. ಇವತ್ತು ನಿಮಗೆ ಮಾತು ಕೊಟ್ಟು ಹೋಗುತ್ತಿದ್ದೇನೆ ಎಂದು ಕುಮಾರಸ್ವಾಮಿ ಆಶ್ವಾಸನೆ ನೀಡಿದ್ದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಾಳೆ (ಸೆ. 29) ಹೋಟೆಲ್ ತಾಜ್‌ನಲ್ಲಿ ಬಿಡುಗಡೆ ಮಾಡುವ ದಾಖಲೆಗಳು ಯಾವ ವಿಷಯಕ್ಕೆ ಸಂಬಂಧಿಸಿದ್ದಾಗಿರಬಹುದು?

## ಕರುನಾಡಲ್ಲಿ ಭಾರತ ಜೋಡೋ 2.0

### ಬಿಜೆಪಿ ಬಳ್ಳಾರಿ ಪಾದಯಾತ್ರೆಗೆ ಠಕ್ಕರ್ ಕೊಡಲು ಕಾಂಗ್ರೆಸ್ ಪ್ಲ್ಯಾನ್

**ಬೆಂಗಳೂರು:** ರಾಜ್ಯದಲ್ಲಿ ಪಾದಯಾತ್ರೆ ರಾಜಕೀಯ ಶುರುವಾಗಿದೆ. ಬಿಜೆಪಿಗೆ ಠಕ್ಕರ್ ಕೊಡಲು ಕಾಂಗ್ರೆಸ್ ಪ್ಲ್ಯಾನ್ ಮಾಡಿಕೊಂಡಿದೆ. 84 ದಿನ 84 ಕ್ಷೇತ್ರಗಳಲ್ಲಿ ಪಾದಯಾತ್ರೆ ಹಮ್ಮಿಕೊಂಡಿದ್ದು, ಇದಕ್ಕೆ ಭಾರತ ಜೋಡೋ 2.0 ಎಂದು ಹೆಸರು ನೀಡಲಾಗಿದೆ.

ಪಾದಯಾತ್ರೆಯ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಮಾಹಿತಿಯನ್ನು ನೀಡಿದ್ದಾರೆ. ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಲೋಕಸಭೆ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು 2022, ಸೆ.7ರಂದು ಕನ್ಯಾಕುಮಾರಿಯಲ್ಲಿ ಭಾರತ ಜೋಡೋ ಪಾದಯಾತ್ರೆ ಆರಂಭಿಸಿದ್ದರು. ನಂತರ ಕರ್ನಾಟಕದಲ್ಲಿ ಸೆ.30ರಂದು ಗುಂಡ್ಲುಪೇಟೆಯಲ್ಲಿ ಯಾತ್ರೆ ಆರಂಭಿಸಿದ್ದರು. ಅಕ್ಟೋಬರ್ 21ರವರೆಗೆ 11 ಜಿಲ್ಲೆಗಳಲ್ಲಿ 600 ಕಿ.ಮೀ ಪಾದಯಾತ್ರೆ ಮಾಡಿ, ಜನಸಾಮಾನ್ಯರನ್ನು ಸಂಪರ್ಕಿಸಿ ಅವರ ಕಷ್ಟ ಆಲಿಸಿದರು. ಮಹಾತ್ಮಾ ಗಾಂಧಿ ಅವರ ಪಾದಯಾತ್ರೆ ಬಳಿಕ ಸುದೀರ್ಘ ಪಾದಯಾತ್ರೆ ನಡೆದಿದ್ದು ರಾಹುಲ್ ಗಾಂಧಿ ಅವರ ಭಾರತ ಜೋಡೋ ಯಾತ್ರೆ" ಎಂದು ವಿವರಿಸಿದರು.

ಈ ಯಾತ್ರೆಯ ನೆನಪಿನಲ್ಲಿ ಇದೇ ಸೆ.30ರಂದು ಭಾರತ ಜೋಡೋ ಯಾತ್ರೆ 2.0 ಅನ್ನು ರಾಜ್ಯದಲ್ಲಿ ಹಮ್ಮಿಕೊಂಡಿದ್ದೇವೆ. ರಾಹುಲ್ ಗಾಂಧಿ ಅವರು ಮಾಡಿದ 11 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 29 ಜಿಲ್ಲೆಗಳಲ್ಲಿ ಈ ಯಾತ್ರೆ ಮಾಡುತ್ತೇವೆ. ಈ ಯಾತ್ರೆಯಲ್ಲಿ ಮಧ್ಯಾಹ್ನ 1ರಿಂದ ಸಂಜೆ ಸಾರ್ವಜನಿಕ ಸಭೆ ಮಾಡುತ್ತೇವೆ. ಕಾಂಗ್ರೆಸ್ ಪಕ್ಷ ಸೋತಿರುವ 84 ಕ್ಷೇತ್ರಗಳಲ್ಲಿ ನಾವು ಈ ಯಾತ್ರೆ ಮಾಡಲು ತೀರ್ಮಾನಿಸಿದ್ದೇವೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಿಂದ ಆರಂಭಿಸುತ್ತಿದ್ದೇವೆ. ಸಚಿವರಾದ ಮಧುಬಂಗಾರಪ್ಪ, ರುದ್ರಪ್ಪ ಲಮಾಣಿ, ಜಮೀರ್ ಅಹ್ಮದ್ ಖಾನ್, ಬಿ ಎಲ್ ಶಂಕರ್ ಸೇರಿದಂತೆ ಪ್ರಮುಖ ನಾಯಕರು, ಜಿಲ್ಲೆಯ ನಾಯಕರು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ. ನಂತರ ಅ. 4-5 ರಿಂದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಶಿಕಾರಿಪುರದಿಂದಲೇ ಪಾದಯಾತ್ರೆ ಹಮ್ಮಿಕೊಂಡಿರುವುದೇಕೆ ಎಂದು ಕೇಳಿದಾಗ, "ಬಿಜೆಪಿ ರಾಜ್ಯಾಧ್ಯಕ್ಷರ ಕ್ಷೇತ್ರದಿಂದ ಬಿಜೆಪಿಯ ನ್ಯೂನ್ಯತೆ ತಿಳಿಸಲು ಹಾಗೂ ಅಜ್ಞಾನೇಶ್ ಕುಮಾರ್ ಅವರು ಸಂವಿಧಾನಿಕ ಸಂಸ್ಥೆಯಾಗಿರುವ ಚುನಾವಣಾ ಆಯೋಗಕ್ಕೆ ಮಾಡುತ್ತಿರುವ ಧಕ್ಕೆ ಬಗ್ಗೆ ಜನಜಾಗೃತಿ ಮೂಡಿಸಲಾಗುವುದು" ಎಂದು ತಿಳಿಸಿದರು. ಎಷ್ಟು ದಿನಗಳ ಪಾದಯಾತ್ರೆ ಎಂದು ಕೇಳಿದಾಗ, "84 ಕ್ಷೇತ್ರಗಳಲ್ಲಿ 84 ದಿನಗಳು ಈ ಪಾದಯಾತ್ರೆ ಮಾಡಲಾಗುವುದು" ಎಂದರು. ಮಾಧ್ಯಮಗೋಷ್ಠಿಯಲ್ಲಿ ಮಾಜಿ ಎಂಎಲ್ ಸಿ ನಾರಾಯಣಸ್ವಾಮಿ ಹಾಗೂ ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಮುಖ್ಯಸ್ಥರಾದ ರಮೇಶ್ ಬಾಬು ಅವರು ಉಪಸ್ಥಿತರಿದ್ದರು.

ಸತ್ಯಮಿಥ್ಯ
SATYA MITHI
Kannada Daily Morning

## ಸಂಗಮ ಸಿರಿ ಪ್ರಶಸ್ತಿಗೆ ಡಾ. ದಯಾನಂದ ನೂಲಿ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಹುಬ್ಬಳ್ಳಿ**
ಹಿರಿಯ ಸಾಹಿತಿ ಡಾ. ಸಂಗಮೇಶ ಹಂಡಿಗಿ ಅವರ ಸ್ಮರಣೆಯಲ್ಲಿ ನೀಡುವ "ಸಂಗಮ ಸಿರಿ "ರಾಜ್ಯ ಮಟ್ಟದ ಪ್ರಶಸ್ತಿಯು ಈ ವರ್ಷ ವಚನ ಸಾಹಿತ್ಯ ಸಂಶೋಧಕರಿಗೆ ನೀಡಲಾಗುತ್ತಿದ್ದು ಈ ಪ್ರಶಸ್ತಿ ಬೆಳಗಾವಿ ಜಿಲ್ಲೆ ಚಿಕ್ಕೋಡಿಯ ಡಾ. ದಯಾನಂದ ನೂಲಿ ಅವರಿಗೆ ನೀಡಲಾಗುತ್ತಿದೆ. ಈ ಪ್ರಶಸ್ತಿಯು 10 ಸಾವಿರ ರೂ.ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಡಾ. ದಯಾನಂದ ನೂಲಿ ಅವರು ಮೂಲತಃ ವೈದ್ಯಕೀಯ ಕ್ಷೇತ್ರದಲ್ಲಿ ಶಸ್ತ್ರಚಿಕಿತ್ಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.ಅವರು ವಚನಗಳನ್ನು ವೈಜ್ಞಾನಿಕವಾಗಿ ಇರುವುದರ ಕುರಿತು "ಶರಣರ ಶಿವಯೋಗ " ಎಂಬ ಕೃತಿಯಲ್ಲಿ ವಚನಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಇವರ "ವಚನಗಳಲ್ಲಿ ಆರೋಗ್ಯಕರ ಪರಿಕಲ್ಪನೆ", "ಮರುಳ ಶಂಕರ ದೇವರು ಅನುಭವ ಯಾತ್ರೆ" ಎಂಬ ಶರಣರ ವಚನಗಳ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದು ಗಮನಾರ್ಹ . ಡಾ.ಪ್ರಭಾಕರ ಕೋರೆ ಅವರ ಕುರಿತು "ಪ್ರಭಾಂಕಲಿ " "ನೆಹಲ್ "ಎಂಬ ಕಥಾ ಸಂಕಲನವನ್ನು ಹೊರತಂದಿದ್ದಾರೆ. ಸಾಹಿತಿಕ ಹಾಗೂ ವೈದ್ಯಕೀಯ ಹಲವು ಲೇಖನಗಳನ್ನು ಪ್ರಕಟಿಸಿದ್ದಾರೆ ರಾಷ್ಟ್ರೀಯ, ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ರಾಜ್ಯದ ಒಟ್ಟು 36 ಜನ ಸಂಶೋಧಕರು ಹೆಸರು ಪ್ರಶಸ್ತಿ ಆಯ್ಕೆಗೆ ಬಂದಿದ್ದವು. ಡಾ.ನೂಲಿ ಅವರಿಗೆ ಈ ವರ್ಷ ನವೆಂಬರ್ ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ "ಸಂಗಮ ಸಿರಿ" ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು ಎಂದು ಡಾ. ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನದ ಅಧ್ಯಕ್ಷ ಜಿ.ಬಿ.ಗೌಡಪ್ಪಗೊಳ, ಗೌರವಾಧ್ಯಕ್ಷ ಗಣಪತಿ ಗಂಗೊಳ್ಳಿ, ಕಾರ್ಯಕ್ರಮ ಸಂಯೋಜಕ ಡಾ. ಪ್ರಭು ಗಂಜಿಹಾಳ ತಿಳಿಸಿದ್ದಾರೆ.




# ಅನ್ನದಾತರ ಪರ ವಿಶೇಷ ಅಧಿವೇಶನ ವಿಫಲ: ನಡಹಳ್ಳಿ

## ಬರಗಾಲದ ಸಂಕಷ್ಟದ ಬಗ್ಗೆ ಗಂಭೀರ ಚರ್ಚೆ ನಡೆಯಲಿಲ್ಲ; ಸಿಎಂ ಕ್ಷಮೆ ಕೇಳಲಿ

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ**
ರಾಜ್ಯದ ಭೀಕರ ಬರಗಾಲದ ಕುರಿತು ಚರ್ಚಿಸಲು ಕರೆಯಲಾಗಿದ್ದ ವಿಶೇಷ ವಿಧಾನಸಭಾ ಅಧಿವೇಶನದಲ್ಲಿ ರೈತರ ಸಂಕಷ್ಟದ ಬಗ್ಗೆ ಗಂಭೀರ ಚರ್ಚೆ ನಡೆಸುವ ಬದಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಬೆಂಗಳೂರಿನ ಕುರಿತು ಹಾಗೂ ಶಾಸಕರ ವೈಯಕ್ತಿಕ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಇದರಿಂದ ಅಧಿವೇಶನದ ಉದ್ದೇಶವೇ ವಿಫಲವಾಗಿದೆ. ಮುಖ್ಯಮಂತ್ರಿ ರಾಜ್ಯದ ರೈತರು ಹಾಗೂ ಜನತೆಯ ಕ್ಷಮೆ ಕೇಳಬೇಕು ಎಂದು ರಾಜ್ಯ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ, ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಆಗ್ರಹಿಸಿದರು.

ಶನಿವಾರ ಬಿದರಕುಂದಿ ರಸ್ತೆಯಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಪಕ್ಷದ ಮುಖಂಡರೊಂದಿಗೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ವಿಶೇಷ ಅಧಿವೇಶನದಲ್ಲಿ ಬಹುತೇಕ ಶಾಸಕರಿಗೆ ಬರಗಾಲದ ಗಂಭೀರತೆಯ ಅರಿವೇ ಇರಲಿಲ್ಲ. ಬರದ ಭೀಕರತೆ, ರೈತರ ಆರ್ಥಿಕ ಸಂಕಷ್ಟ ಹಾಗೂ ಮುಂದಿನ ದಿನಗಳ ಪರಿಸ್ಥಿತಿಗೆ ಸಂಬಂಧಿಸಿದ ಅಂಕಿ–ಅಂಶಗಳೊಂದಿಗೆ ಚರ್ಚೆ ನಡೆಯಲಿಲ್ಲ. ಕಾಟಾಚಾರಕ್ಕೆ ಅಧಿವೇಶನ ನಡೆಸಿದಂತಾಗಿದೆ ಎಂದು ಟೀಕಿಸಿದರು. ವಿಶೇಷ ಅಧಿವೇಶನವು ವಿಧಾನಸಭೆಗೆ ಅವಮಾನ ಹಾಗೂ ಕಪ್ಪುಚುಕ್ಕೆ ಎನ್ನಿಸುವಂತಾಗಿದೆ. ರೈತರ ಸಂಕಷ್ಟದ ಕುರಿತು ಗಂಭೀರ ಚರ್ಚೆ ನಡೆಸಿ, ಪರಿಹಾರ ಕ್ರಮಗಳ ಬಗ್ಗೆ ನಿರ್ಣಯ ಕೈಗೊಳ್ಳಬೇಕಿದ್ದ ಸಂದರ್ಭದಲ್ಲಿ ಶಾಸಕರಿಂದ ನಿರೀಕ್ಷಿತ ಮಟ್ಟದ ಚರ್ಚೆ ನಡೆಯಲಿಲ್ಲ ಎಂದು ಆರೋಪಿಸಿದರು.

ರೈತ ಹೋರಾಟದ ಫಲವಾಗಿ ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿರುವುದು ಸ್ವಾಗತಾರ್ಹ. ಆದರೆ ಎಕರೆಗೆ ₹50 ಸಾವಿರ ಪರಿಹಾರ ನೀಡಬೇಕು ಎಂಬ ರೈತರ ಬೇಡಿಕೆಯನ್ನು ಸರ್ಕಾರ ನಿರ್ಲಕ್ಷಿಸಿ ಕೇವಲ ₹2,500 ಪರಿಹಾರ ಘೋಷಿಸಿರುವುದು ಸಮರ್ಪಕವಲ್ಲ. ಈ ಮೊತ್ತ ರೈತರ ಸಂಕಷ್ಟಕ್ಕೆ ಯಾವುದೇ ರೀತಿಯಲ್ಲಿ ಸಾಕಾಗುವುದಿಲ್ಲ ಎಂದು ನಡಹಳ್ಳಿ ಹೇಳಿದರು.

ಸುಮಾರು 150 ವರ್ಷಗಳ ಬಳಿಕ ಮತ್ತೊಮ್ಮೆ ಇಂತಹ ಭೀಕರ ಬರಗಾಲ ಎದುರಾಗಿದೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆಯಿದೆ. ಈ ಬಗ್ಗೆ ಸರ್ಕಾರ, ಸಚಿವರು ಹಾಗೂ ಶಾಸಕರಿಗೆ ಮಾಹಿತಿ ಇದ್ದರೂ ವಿಧಾನಸಭೆಯಲ್ಲಿ ಅದರ ಗಂಭೀರತೆ ಪ್ರತಿಫಲಿಸದಿರುವುದು ವಿಷಾದನೀಯ ಎಂದರು.



ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕೇಂದ್ರದ ಎಸ್‌ಡಿಆರ್‌ಎಫ್ ನಿಯಮಗಳಡಿ ಲಭ್ಯವಿದ್ದ ಪರಿಹಾರದ ಜೊತೆಗೆ ರಾಜ್ಯದ ರಾಜಸ್ವ ನಿಧಿಯಿಂದಲೂ ಹೆಚ್ಚುವರಿ ನೆರವು ನೀಡಲಾಗಿತ್ತು. ಈಗಿನ ಸರ್ಕಾರವೂ ರೈತರ ಸಂಕಷ್ಟಕ್ಕೆ ಹೆಚ್ಚುವರಿ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಚುನಾವಣೆಯಲ್ಲಿ ಪಕ್ಷಗಳ ಚಿಹ್ನೆಯ ಆಧಾರದ ಮೇಲೆ ಮತ ಪಡೆದು ವಿಧಾನಸಭೆಗೆ ಆಯ್ಕೆಯಾಗುವ ಶಾಸಕರು, ಸದನಕ್ಕೆ ಹೋದ ಬಳಿಕ ಆಡಳಿತ ಹಾಗೂ ವಿರೋಧ ಪಕ್ಷ ಎಂಬ ಭೇದವಿಲ್ಲದೆ ರಾಜ್ಯದ ಜನರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಬೇಕು. ಬರಗಾಲದ ಭೀಕರತೆಯನ್ನು ಅಂಕಿ–ಅಂಶಗಳ ಸಮೇತ ಸದನದಲ್ಲಿ ಮಂಡಿಸಿ, ಪರಿಹಾರಕ್ಕಾಗಿ ಒತ್ತಾಯಿಸಿದ್ದರೆ ವಿಶೇಷ ಅಧಿವೇಶನ ಸಾರ್ಥಕವಾಗುತ್ತಿತ್ತು ಎಂದು ಹೇಳಿದರು.

ರೈತರ ಸಮಸ್ಯೆಗಳ ಕುರಿತು ಚರ್ಚಿಸುವಲ್ಲಿ ಶಾಸಕರು ವಿಫಲರಾಗಿದ್ದಾರೆ ಎಂದು ಆರೋಪಿಸಿದ ನಡಹಳ್ಳಿ, ರೈತರು ತಮ್ಮ ಕ್ಷೇತ್ರಗಳಿಗೆ ಬರುವ ಶಾಸಕರನ್ನು ಬರಗಾಲದ ಕುರಿತು ಪ್ರಶ್ನಿಸಬೇಕು ಎಂದು ಕರೆ ನೀಡಿದರು. ಸರ್ಕಾರದ ಬರ ನಿರ್ವಹಣೆ ಇದೇ ರೀತಿ ಮುಂದುವರಿದರೆ ರೈತರಲ್ಲಿ ಆಕ್ರೋಶ ಹೆಚ್ಚಾಗುವ ಸಾಧ್ಯತೆಯಿದ್ದು, ಹಿಂದೆ ನಡೆದ ನವಲಗುಂದ, ನರಗುಂದ ಮಾದರಿಯ ರೈತ ಹೋರಾಟದ ಪರಿಸ್ಥಿತಿ ಮರುಕಳಿಸಬಹುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಜಿ.ಪಂ. ಅಧ್ಯಕ್ಷ ಗಂಗಾಧರ ನಾಡಗೌಡ, ಮಾಜಿ ಜಿ.ಪಂ. ಉಪಾಧ್ಯಕ್ಷ ಕೆಂಚಪ್ಪ ಬಿರಾದಾರ, ಬಿಜೆಪಿ ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ, ಮುಖಂಡರಾದ ಮಲಕೆಂದ್ರಗೌಡ ಪಾಟೀಲ, ಹರೀಶ ನಾಟಿಕಾರ, ಹಣಮಂತ ನಾಯ್ಕಮಕ್ಕಳ, ಗುರುನಾಥ ಬಿರಾದಾರ, ಸಿದ್ದರಾಜ ಹೋಳಿ ಹಾಗೂ ಮಲ್ಲಿಕಾರ್ಜುನ ತಂಗಡಗಿ ಇದ್ದರು.

## ಸಂಗೊಳ್ಳಿ ರಾಯಣ್ಣ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮದ ಪೂರ್ವಭಾವಿ ಸಭೆ ಯಶಸ್ವಿ

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:**
ಪಟ್ಟಣದ ಮಧ್ಯಭಾಗದಲ್ಲಿ ಪ್ರತಿಷ್ಠಾಪಿಸಲಾಗಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿ ಲೋಕಾರ್ಪಣೆಯ ಅಂಗವಾಗಿ ಸಪ್ಟೆಂಬರ್ 27 ರವಿವಾರದಂದು ಪೂರ್ವಭಾವಿ ಸಭಯನ್ನು ಪಟ್ಟಣದ ಶ್ರೀ ಕನಕದಾಸ ಶಾಲಾ ಆವರಣದಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಪೂಜ್ಯರು, ಹಾಲುಮತ ಸಮಾಜದ ಅಧ್ಯಕ್ಷರು, ಸಮಾಜದ ಹಿರಿಯರು, ಸದಸ್ಯರು ಹಾಗೂ ಯುವಕರು ಸೇರಿದಂತೆ ವಿವಿಧ ವರ್ಗದ ಮುಖಂಡರು ಭಾಗವಹಿಸಿ ಕಾರ್ಯಕ್ರಮದ ರೂಪುರೇಷೆಗಳ ಕುರಿತು ಸಲಹೆ–ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಂದ ಲೋಕಾರ್ಪಣೆ ಮಾಡಿಸಬೇಕು ಎಂಬ ಕೂಗು ಕೇಳಿದ ಹಿನ್ನೆಲೆಯಲ್ಲಿ. ಅವರನ್ನು ಭೇಟಿಯಾಗಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ದಿನಾಂಕ ನಿಗದಿಪಡಿಸುವ ಕುರಿತು ಚರ್ಚಿಸಲಾಯಿತು.ಮಾಜಿ ಮುಖ್ಯಮಂತ್ರಿಗಳು ಮೂರ್ತಿ ಲೋಕಾರ್ಪಣೆಗೆ ಒಪ್ಪಿಗೆ ನೀಡಿದ ಕೂಡಲೇ ಅವರು ದಿನಾಂಕ ನೀಡಿದ ನಂತರ, ಇಲ್ಲಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಎಲ್ಲಾ ಪೂರ್ವಸಿದ್ಧತೆಗಳನ್ನು ಕೈಗೊಂಡು, ಎಲ್ಲರ ಸಹಕಾರದೊಂದಿಗೆ ಮುದ್ದೇಬಿಹಾಳ ಪಟ್ಟಣದಲ್ಲಿ ಅದ್ಧೂರಿ ಹಾಗೂ ಐತಿಹಾಸಿಕ ಕಾರ್ಯಕ್ರಮವನ್ನು ಆಯೋಜಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಂಗೊಳ್ಳಿ ರಾಯಣ್ಣನವರ ಶೌರ್ಯ, ದೇಶಭಕ್ತಿ ಹಾಗೂ ತ್ಯಾಗದ ಸಂದೇಶವನ್ನು ಮುಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮತ್ತು ಶಿಸ್ತುಬದ್ಧವಾಗಿ ನಡೆಸಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವ ಸಂಕಲ್ಪ ಮಾಡಿದರು. ಇದೇ ವೇಳೆಯಲ್ಲಿ ಪೂಜ್ಯರು, ಸಮಾಜದ ಮುಖಂಡರು, ಯುವಕರು,ಪಾಲ್ಗೊಂಡಿದ್ದರು.



## ಹಾಸ್ಯದ ಮೂಲಕ ಸಮಾಜದ ಅಂಕು– ಡೊಂಕುಗಳಿಗೆ ಕನ್ನಡಿ ಹಿಡಿದ ಬೀಚಿ : ಡಾ. ಡಿ.ಎ. ಉಪಾಧ್ಯ ಹೇಳಿಕೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಮತ್ತು ವ್ಯಂಗ್ಯವನ್ನು ಕೇವಲ ಮನರಂಜನೆಯ ಸಾಧನವನ್ನಾಗಿ ಬಳಸದೆ, ಸಮಾಜದಲ್ಲಿನ ವೈರುಧ್ಯಗಳು, ಅಸಮಾನತೆಗಳು, ನ್ಯೂನತೆಗಳು ಹಾಗೂ ಅಂಕುಡೊಂಕುಗಳನ್ನು ಎತ್ತಿ ತೋರಿಸುವ ಪ್ರಬಲ ಅಸ್ತ್ರವನ್ನಾಗಿ ಬಳಸಿದ ಸಾಹಿತಿ ಬೀಚಿಯವರು. ಅವರ ಬರಹಗಳು ಓದುಗರನ್ನು ನಗಿಸುವುದರ ಜತೆಗೆ ಆತ್ಮಾವಲೋಕನಕ್ಕೂ ಪ್ರೇರೇಪಿಸುತ್ತವೆ ಎಂದು ಅಬ್ಬಿಗೇರಿ ಕಲಾಕಾಶಿ ಸಂಸ್ಥಾಪಕ ಡಾ. ಡಿ.ಎ. ಉಪಾಧ್ಯ ಹೇಳಿದರು.

ಸಮೀಪದ ಅಬ್ಬಿಗೇರಿ ಗ್ರಾಮದ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಮಠದಲ್ಲಿ ಶನಿವಾರ ನಡೆದ ಬೀಚಿ ಬಳಗದ ಮಾಸಿಕ ಸಭೆಯಲ್ಲಿ 'ಬೀಚಿಯವರ ಜೀವನ ಮತ್ತು ಸಾಹಿತ್ಯ' ವಿಷಯ ಕುರಿತು ಉಪನ್ಯಾಸ ನೀಡಿದ ಅವರು ಮಾತನಾಡಿದರು.

ಬೀಚಿಯವರ ಸಾಹಿತ್ಯದಲ್ಲಿ ಹಾಸ್ಯಕ್ಕೆ ವಿಶೇಷ ಸ್ಥಾನವಿದೆ. ಆದರೆ ಅವರ ಹಾಸ್ಯದ ಒಳನೋಟವನ್ನು ಗಮನಿಸಿದಾಗ ಅದರ ಹಿಂದೆ ಗಂಭೀರವಾದ ಸಾಮಾಜಿಕ ಚಿಂತನೆ ಅಡಗಿರುವುದು ಗೋಚರಿಸುತ್ತದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ವೈರುಧ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳನ್ನು ವ್ಯಂಗ್ಯದ ಮೂಲಕ ಓದುಗರ ಮುಂದಿಡುವ ಮೂಲಕ ತಮ್ಮದೇ ಆದ ವಿಶಿಷ್ಟ ಸಾಹಿತ್ಯಕ ಶೈಲಿಯನ್ನು ರೂಪಿಸಿಕೊಂಡಿದ್ದರು. ಹೀಗಾಗಿ ಅವರ ಬರಹಗಳು ನಗುವಿನೊಂದಿಗೆ ಚಿಂತನೆಯನ್ನೂ ಹುಟ್ಟುಹಾಕುತ್ತವೆ ಎಂದರು.

ಬೀಚಿಯವರು ಕಾದಂಬರಿ, ಲೇಖನ, ಚುಟುಕು, ನಾಟಕ ಸೇರಿದಂತೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಸರಳ ಭಾಷೆ, ಸಹಜ ನಿರೂಪಣೆ, ಚುರುಕಾದ ವ್ಯಂಗ್ಯ ಹಾಗೂ ಬದುಕಿನ ನೈಜ ಚಿತ್ರಣ ಅವರ ಬರಹಗಳ ಪ್ರಮುಖ ಲಕ್ಷಣಗಳಾಗಿವೆ. ಸಾಮಾನ್ಯ ಜನರ ಬದುಕಿನಲ್ಲಿ ಕಾಣಸಿಗುವ ಸಣ್ಣಪುಟ್ಟ ಘಟನೆಗಳನ್ನೇ ಸಾಹಿತ್ಯದ ವಸ್ತುವನ್ನಾಗಿ ಮಾಡಿಕೊಂಡು, ಅವುಗಳ ಮೂಲಕ ದೊಡ್ಡ ಸಾಮಾಜಿಕ ಪ್ರಶ್ನೆಗಳನ್ನು ಎತ್ತುವ ಶಕ್ತಿ ಅವರಲ್ಲಿತ್ತು ಎಂದು ಹೇಳಿದರು.

ಸಾಹಿತ್ಯವು ಸಮಾಜದ ಕನ್ನಡಿ ಮಾತ್ರವಲ್ಲ, ಸಮಾಜವನ್ನು ಎಚ್ಚರಿಸುವ ಶಕ್ತಿಯೂ ಹೌದು. ಸಮಾಜದಲ್ಲಿನ ತಪ್ಪುಗಳನ್ನು ಕೇವಲ ಟೀಕಿಸುವುದಕ್ಕಿಂತ ಅವುಗಳ ಕುರಿತು ಜನರು ಯೋಚಿಸುವಂತೆ ಮಾಡುವುದು ಸಾಹಿತ್ಯದ ದೊಡ್ಡ ಸಾಧನೆ. ಬೀಚಿಯವರು ತಮ್ಮ ಹಾಸ್ಯ ಮತ್ತು ವ್ಯಂಗ್ಯದ ಮೂಲಕ ಈ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಿದ್ದಾರೆ ಎಂದರು.

ಸಾಹಿತ್ಯದ ರೂಪ, ಭಾಷೆ ಮತ್ತು ಶೈಲಿ ಕಾಲಕ್ಕೆ ತಕ್ಕಂತೆ ಬದಲಾಗುತ್ತವೆ. ಆದರೆ ಸಾಹಿತ್ಯದ ಮೂಲ ಆಶಯ ಮನುಷ್ಯನ ಬದುಕನ್ನು ಉತ್ತಮಗೊಳಿಸುವುದಾಗಿರಬೇಕು. ಸಮಾಜದಲ್ಲಿ ಮಾನವೀಯತೆ, ವಿವೇಕ, ಜ್ಞಾನ ಮತ್ತು ಸೌಹಾರ್ದವನ್ನು ಬೆಳೆಸುವ ಕೆಲಸ ಸಾಹಿತ್ಯದಿಂದ ನಡೆಯಬೇಕು. ಈ ನಿಟ್ಟಿನಲ್ಲಿ ಕುವೆಂಪು, ಬೇಂದ್ರೆ ಸೇರಿದಂತೆ ಅನೇಕ ಸಾಹಿತಿಗಳ ಕೊಡುಗೆ ಮಹತ್ವದ್ದಾಗಿದೆ ಎಂದು ಡಾ. ಉಪಾಧ್ಯ ಹೇಳಿದರು.

ನಿವೃತ್ತ ಶಿಕ್ಷಕ ಎಂ.ಎಸ್. ಧಡೇಸೂರಮಠ ಮಾತನಾಡಿ, ಲಕ್ಷ್ಮಿ ಚಂಚಲೆ; ಆದರೆ ಸರಸ್ವತಿಯ ಜ್ಞಾನ ಮತ್ತು ಕೀರ್ತಿ ಶಾಶ್ವತವಾದುದು. ಸಂಪತ್ತು ಕಾಲಕ್ರಮೇಣ ಬದಲಾಗಬಹುದು. ಆದರೆ ಜ್ಞಾನ ಮತ್ತು ಸಾಹಿತ್ಯದ ಮೂಲಕ ಸಮಾಜಕ್ಕೆ ನೀಡಿದ ಕೊಡುಗೆ ಪೀಳಿಗೆಯಿಂದ ಪೀಳಿಗೆಗೆ ಉಳಿಯುತ್ತದೆ. ಸರಸ್ವತಿಯ ಆರಾಧನೆಗೆ ಮಹತ್ವ ನೀಡಿರುವ ಮಠಗಳು ಹಾಗೂ ಸಂಸ್ಥೆಗಳು ಜ್ಞಾನಲೋಕದಲ್ಲಿ ತಮ್ಮದೇ ಆದ ಸ್ಥಾನ ಪಡೆದಿವೆ. ಇದಕ್ಕೆ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಮಠವೂ ಉತ್ತಮ ಉದಾಹರಣೆಯಾಗಿದೆ ಎಂದರು.

ಮಠಗಳು ಕೇವಲ ಧಾರ್ಮಿಕ ಚಟುವಟಿಕೆಗಳಿಗೆ ಸೀಮಿತವಾಗದೆ, ಜ್ಞಾನ, ಸಾಹಿತ್ಯ, ಸಂಸ್ಕೃತಿ ಹಾಗೂ ಸಾಮಾಜಿಕ ಜಾಗೃತಿಯ ಕೇಂದ್ರಗಳಾಗಬೇಕು. ಇಂತಹ ಸಭೆಗಳು ಸಾಹಿತ್ಯಾಸಕ್ತರನ್ನು ಒಂದೆಡೆ ಸೇರಿಸುವುದರ ಜತೆಗೆ ಹೊಸ ಪೀಳಿಗೆಗೆ ಸಾಹಿತ್ಯದ ಪರಿಚಯ ಮಾಡಿಕೊಡುವ ಕಾರ್ಯ ಮಾಡುತ್ತವೆ ಎಂದು ಹೇಳಿದರು.

ಸದ್ಗುರು ಯಲ್ಲಾಲಿಂಗೇಶ್ವರ ಮಠದ ಬಸವರಾಜ ಶರಣರು ಆಶೀರ್ವಚನ ನೀಡಿ, ಕನ್ನಡದ ಖ್ಯಾತ ಸಾಹಿತಿ ಬೀಚಿಯವರ ಬದುಕು, ಸಾಹಿತ್ಯ ಹಾಗೂ ಸಾಮಾಜಿಕ ಕಳಕಳಿಯನ್ನು ಇಂದಿನ ಪೀಳಿಗೆ ಅರಿತುಕೊಳ್ಳಬೇಕಾಗಿದೆ. ಓದುವ ಹವ್ಯಾಸ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಸಾಹಿತ್ಯಾಸಕ್ತರು ಇಂತಹ ಮಾಸಿಕ ಸಭೆಗಳ ಮೂಲಕ ಯುವಜನರನ್ನು ಸಾಹಿತ್ಯದತ್ತ ಸೆಳೆಯುವ ಪ್ರಯತ್ನ ಮಾಡಬೇಕು ಎಂದರು.

ಬೀಚಿಯವರ ಸಾಹಿತ್ಯವನ್ನು ಓದುವುದರಿಂದ ಹಾಸ್ಯಪ್ರಜ್ಞೆಯ ಜತೆಗೆ ಸಮಾಜವನ್ನು ನೋಡುವ ವಿಭಿನ್ನ ದೃಷ್ಟಿಕೋನವೂ ಬೆಳೆಯುತ್ತದೆ. ಅವರ ಬರಹಗಳಲ್ಲಿರುವ ಸಾಮಾಜಿಕ ಸಂದೇಶವನ್ನು ಹೊಸ ಪೀಳಿಗೆಗೆ ತಲುಪಿಸುವುದು ಬೀಚಿ ಬಳಗದಂತಹ ಸಾಹಿತ್ಯ ಸಂಘಟನೆಗಳ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ನಿವೃತ್ತ ಮುಖ್ಯ ಶಿಕ್ಷಕ ಅರುಣ ಕುಲಕರ್ಣಿ ಮಾತನಾಡಿ, ಬೀಚಿ ಬಳಗದ ಸ್ಥಾಪನೆ, ಅದರ ಉದ್ದೇಶ ಹಾಗೂ ವಿವಿಧ ಚಟುವಟಿಕೆಗಳ ಕುರಿತು ವಿವರಿಸಿದರು. ಬೀಚಿಯವರ ಸಾಹಿತ್ಯವನ್ನು ಓದಿ, ಚರ್ಚಿಸಿ, ಅವರ ಸಾಹಿತ್ಯದಲ್ಲಿರುವ ಜೀವನದೃಷ್ಟಿಯನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶದಿಂದ ಬಳಗ ಕಾರ್ಯನಿರ್ವಹಿಸುತ್ತಿದೆ ಎಂದರು.

ಬೀಚಿಯವರ ಜೀವನದಲ್ಲಿ ನಡೆದ ವಿವಿಧ ಪ್ರಸಂಗಗಳನ್ನು ಮೆಲುಕು ಹಾಕಿದ ಅವರು, ಅವರ ವ್ಯಕ್ತಿತ್ವದಲ್ಲಿ ಹಾಸ್ಯಪ್ರಜ್ಞೆಯ ಜತೆಗೆ ಸೂಕ್ಷ್ಮವಾದ ಸಾಮಾಜಿಕ ಗ್ರಹಿಕೆ ಇತ್ತು. ಬದುಕಿನ ಸಣ್ಣ ಘಟನೆಗಳನ್ನೂ ಗಮನಿಸಿ, ಅದರಿಂದ ವಿಶಾಲವಾದ ಅರ್ಥವನ್ನು ಕಟ್ಟಿಕೊಡುವ ಸಾಮರ್ಥ್ಯ ಅವರಲ್ಲಿತ್ತು. ಇದೇ ಕಾರಣಕ್ಕೆ ಅವರ ಸಾಹಿತ್ಯ ಇಂದಿಗೂ ಓದುಗರನ್ನು ಸೆಳೆಯುತ್ತಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಇಟಗಿಯ ಶಿವಶರಣ ಗದಿಗೆಪ್ಪಜ್ಜನವರ ಮಾತನಾಡಿದರು.

ಡಯಟ್‌ನ ನಿವೃತ್ತ ಉಪನ್ಯಾಸಕ ಕಾಶಿನಾಥ ಸಾಲಿಮಠ ಪ್ರಾರ್ಥಿಸಿದರು. ಪ್ರಾಚಾರ್ಯ ಶಿವಾನಂದ ಗೊಗೇರಿ ಸ್ವಾಗತಿಸಿದರು. ನಿವೃತ್ತ ಪ್ರಾಂಶುಪಾಲ ದೊಡ್ಡಯ್ಯ ಅರವಟಗಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಮಹಾದೇವಪ್ಪ ಬೇವಿನಕಟ್ಟಿ ನಿರೂಪಿಸಿದರು. ಶಿಕ್ಷಕ ಬಸವರಾಜ ಕುರಿ ಪರಿಚಯಿಸಿದರು. ಅಂದಪ್ಪ ವೀರಾಪೂರ ವಂದಿಸಿದರು.

ಬೀಚಿ ಬಳಗದ ಸದಸ್ಯರಾದ ಕಳಕಪ್ಪ ಕಳಕಣ್ಣವರ, ಡಾ. ಲಿಂಗಯ್ಯ ಗೌರಿ, ರಾಚಯ್ಯ ಮಠದ ಗುರುಪಾದಪ್ಪ ಬೆಲ್ಲದ, ಜೆ.ಎ. ಪಾಟೀಲ, ಭರಮಪ್ಪ ತಾಳಿ, ವೀರಭದ್ರಪ್ಪ ಕೇರಿಯವರ, ಸಂಗಮೇಶ ಮೆಣಸಗಿ, ಮಲ್ಲಯ್ಯ ಗುಂಡಗೋಪುರಮಠ ಸೇರಿದಂತೆ ಹಲವು ಸಾಹಿತ್ಯಾಸಕ್ತರು ಸಭೆಯಲ್ಲಿ ಪಾಲ್ಗೊಂಡಿದ್ದರು.




## 2,500 ಬರ ಪರಿಹಾರ ಸಾಲದು; ಬೆಳೆ ನಷ್ಟಕ್ಕೆ ತಕ್ಕ ಪರಿಹಾರ ನೀಡಿ: ಉಮೇಶ ಚನ್ನು ಪಾಟೀಲ ಆಗ್ರಹ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಬರದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ರಾಜ್ಯ ಸರ್ಕಾರ ನೀಡಲು ಮುಂದಾಗಿರುವ 2,500 ಬರ ಪರಿಹಾರದ ಮೊತ್ತ ಅತ್ಯಂತ ಕಡಿಮೆಯಾಗಿದ್ದು, ರೈತರ ನೈಜ ಬೆಳೆ ನಷ್ಟಕ್ಕೆ ಅನುಗುಣವಾಗಿ ಪರಿಹಾರ ಮೊತ್ತವನ್ನು ತಕ್ಷಣ ಹೆಚ್ಚಿಸಬೇಕು ಎಂದು ಬಿಜೆಪಿ ಯುವ ಮುಖಂಡ ಉಮೇಶ ಚನ್ನು ಪಾಟೀಲ ಆಗ್ರಹಿಸಿದರು.



ಮಳೆ ಕೊರತೆ, ಬೆಳೆ ನಷ್ಟ, ಕೃಷಿ ಚಟುವಟಿಕೆಗಳ ಹೆಚ್ಚುತ್ತಿರುವ ವೆಚ್ಚ, ಜಾನುವಾರುಗಳಿಗೆ ಮೇವು ಹಾಗೂ ಕುಡಿಯುವ ನೀರಿನ ಸಮಸ್ಯೆಯಿಂದ ರೈತರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೇವಲ 2,500 ಪರಿಹಾರ ನೀಡುವುದು ಸಮುದ್ರಕ್ಕೆ ಹನಿಯಷ್ಟು ಪರಿಹಾರ ನೀಡಿದಂತಾಗುತ್ತದೆ ಎಂದು ಅವರು ಟೀಕಿಸಿದರು.

“ಒಂದು ಎಕರೆ ಬೆಳೆ ಬೆಳೆಯಲು ರೈತ ಕನಿಷ್ಠ 30 ಸಾವಿರಕ್ಕೂ ಹೆಚ್ಚು ಖರ್ಚು ಮಾಡುತ್ತಾನೆ. ಬರದಿಂದ ಸಂಪೂರ್ಣ ಬೆಳೆ ಕೈಕೊಟ್ಟಾಗ 2,500 ಪರಿಹಾರ ನೀಡುವುದರಿಂದ ರೈತರ ಸಂಕಷ್ಟ ಪರಿಹಾರವಾಗುವುದಿಲ್ಲ. ರೈತರ ಬದುಕು ಉಳಿಸುವಂತಹ ಸಮರ್ಪಕ ಪರಿಹಾರ ನೀಡಬೇಕು” ಎಂದು ಅವರು ಒತ್ತಾಯಿಸಿದರು.

ಬೆಳೆ ನಷ್ಟಕ್ಕೆ ಅನುಗುಣವಾಗಿ ಪರಿಹಾರ ಮೊತ್ತವನ್ನು ಹೆಚ್ಚಿಸಿ, ಅರ್ಹ ಪ್ರತಿಯೊಬ್ಬ ರೈತನ ಖಾತೆಗೆ ಶೀಘ್ರ ಹಣ ಜಮೆ ಮಾಡಬೇಕು. ಬೆಳೆ ವಿಮೆ ಹಾಗೂ ಇತರ ಪರಿಹಾರ ಯೋಜನೆಗಳ ಹಣವನ್ನು ವಿಳಂಬವಿಲ್ಲದೆ ಬಿಡುಗಡೆ ಮಾಡಬೇಕು. ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಮರ್ಪಕ ಮೇವು ಒದಗಿಸಬೇಕು ಎಂದು ಅವರು ಆಗ್ರಹಿಸಿದರು.

ಅಲ್ಲದೆ, ರೈತರ ಕೃಷಿ ಸಾಲದ ಮೇಲಿನ ಬಡ್ಡಿ ಹಾಗೂ ಮರುಪಾವತಿ ಕುರಿತು ತಕ್ಷಣ ಕ್ರಮ ಕೈಗೊಳ್ಳಬೇಕು. ಮುಂದಿನ ಹಂಗಾಮಿಗೆ ಅಗತ್ಯವಿರುವ ಬೀಜ, ರಸಗೊಬ್ಬರ ಹಾಗೂ ಕೃಷಿ ಪರಿಕರಗಳನ್ನು ಸರ್ಕಾರದ ನೆರವಿನ ರೂಪದಲ್ಲಿ ಒದಗಿಸಬೇಕು ಎಂದು ಅವರು ಹೇಳಿದರು.

“ರೈತ ಕೇವಲ ಮತದಾರನಲ್ಲ; ಅನ್ನದಾತ. ಸಂಕಷ್ಟದ ಸಂದರ್ಭದಲ್ಲಿ ರೈತರ ಬೆನ್ನಿಗೆ ನಿಲ್ಲುವುದು ಸರ್ಕಾರದ ಕರ್ತವ್ಯ. 2,500 ಪರಿಹಾರವನ್ನು ಮರುಪರಿಶೀಲಿಸಿ, ನೈಜ ಬೆಳೆ ನಷ್ಟಕ್ಕೆ ಅನುಗುಣವಾಗಿ ನ್ಯಾಯಯುತ ಪರಿಹಾರ ನೀಡಬೇಕು. ಇಲ್ಲವಾದರೆ ರೈತರ ಪರವಾಗಿ ಜನಜಾಗೃತಿ ಹಾಗೂ ಪ್ರಜಾಸತ್ತಾತ್ಮಕ ಹೋರಾಟ ನಡೆಸಲಾಗುವುದು” ಎಂದು ಉಮೇಶ ಚನ್ನು ಪಾಟೀಲ ಎಚ್ಚರಿಸಿದರು.

# ಸರ್ಕಾರವೇ ಜನರ ಬಾಗಿಲಿಗೆ: ಗೋಠೆಯಲ್ಲಿ ಪ್ರಜಾ ಸೇವಾ ಆಂದೋಲನಕ್ಕೆ ಚಾಲನೆ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:**
ಸರ್ಕಾರದ ವಿವಿಧ ಜನಪರ ಯೋಜನೆಗಳು ಹಾಗೂ ಸರ್ಕಾರಿ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ 'ಪ್ರಜಾ ಸೇವಾ ಆಂದೋಲನ–ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮವು ಜಮಖಂಡಿ ತಾಲೂಕಿನ ಗೋಠೆ ಗ್ರಾಮದಲ್ಲಿ ಶನಿವಾರ ನಡೆಯಿತು.

ಕಾರ್ಯಕ್ರಮದಲ್ಲಿ ಜಮಖಂಡಿ ತಹಶೀಲ್ದಾರ್ ಅನೀಲ ಬಡಿಗೇರ ಮಾತನಾಡಿ, ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿಸುವುದು ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಪದೇಪದೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು. ಅಧಿಕಾರಿಗಳು ಜನರ ಬಳಿಗೆ ತೆರಳಿ ಅವರ ಸಮಸ್ಯೆಗಳನ್ನು ಆಲಿಸಿ, ನಿಯಮಾನುಸಾರ ತ್ವರಿತವಾಗಿ ಪರಿಹರಿಸಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಗ್ರಾಮೀಣ ಭಾಗದ ಜನರಿಗೆ ಸರ್ಕಾರದ ವಿವಿಧ ಯೋಜನೆಗಳು, ಸೌಲಭ್ಯಗಳು ಹಾಗೂ ಇಲಾಖೆಗಳ ಸೇವೆಗಳ ಕುರಿತು ಸಮಗ್ರ ಮಾಹಿತಿ ಒದಗಿಸುವುದು ಆಂದೋಲನದ ಪ್ರಮುಖ ಉದ್ದೇಶವಾಗಿದೆ. ಸಾರ್ವಜನಿಕರ ಅಹವಾಲುಗಳನ್ನು ಸ್ಥಳದಲ್ಲಿಯೇ ಸ್ವೀಕರಿಸಿ, ಸಂಬಂಧಿಸಿದ ಇಲಾಖೆಗಳ ಮೂಲಕ ಪರಿಹಾರ ಕಂಡುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಕಂದಾಯ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಆಯಾ ಇಲಾಖೆಗಳ ವತಿಯಿಂದ ದೊರೆಯುವ ಯೋಜನೆಗಳು, ಸೌಲಭ್ಯಗಳು, ಅರ್ಹತೆ ಹಾಗೂ ಅರ್ಜಿ ಸಲ್ಲಿಸುವ ವಿಧಾನಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.



ಈ ವೇಳೆ ಗ್ರಾಮಸ್ಥರು ಜಮೀನು ಹಾಗೂ ಕಂದಾಯ ದಾಖಲೆಗಳು, ಪಿಂಚಣಿ, ವಸತಿ, ಕೃಷಿ, ವಿವಿಧ ಪ್ರಮಾಣಪತ್ರಗಳು ಹಾಗೂ ಸರ್ಕಾರಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ತಮ್ಮ ಅಹವಾಲುಗಳನ್ನು ಅಧಿಕಾರಿಗಳ ಮುಂದೆ ಸಲ್ಲಿಸಿದರು. ಸಾರ್ವಜನಿಕರಿಂದ ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ, ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸರ್ಕಾರಿ ಯೋಜನೆಗಳ ಪ್ರಯೋಜನ ಪಡೆಯಲು ಜನರಿಗೆ ಮಾಹಿತಿ ಕೊರತೆಯಾಗಬಾರದು ಹಾಗೂ ಕಚೇರಿಗಳಿಗೆ ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ತಪ್ಪಬೇಕು. ಗ್ರಾಮೀಣ ಪ್ರದೇಶದಲ್ಲಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವಲ್ಲಿ ಇಂತಹ ಆಂದೋಲನಗಳು ಸಹಕಾರಿಯಾಗಲಿವೆ. ಸಾರ್ವಜನಿಕರು ತಮ್ಮ ಹಕ್ಕುಗಳು ಹಾಗೂ ಸರ್ಕಾರದ ಯೋಜನೆಗಳ ಕುರಿತು ಅರಿವು ಹೊಂದಿ, ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂಬ ಕರೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಬಡಿಗೇರ, ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳು, ಜಮಖಂಡಿ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ, ಗ್ರಾಮಸ್ಥರು ಮತ್ತು ಮುಖಂಡರು ಉಪಸ್ಥಿತರಿದ್ದರು.

# ಎಸ್‌ಎಫ್‌ಐ ಕಚೇರಿಯಲ್ಲಿ ಭಗತ್ ಸಿಂಗ್ ಜಯಂತಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಭಾರತ ಕಮ್ಯುನಿಸ್ಟ್ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ ) ಗಜೇಂದ್ರಗಡ ತಾಲೂಕು ಸಮಿತಿಯ ನೇತೃತ್ವದಲ್ಲಿ ಸಂಘದ ಕಚೇರಿಯಲ್ಲಿ ಕ್ರಾಂತಿಕಾರಿ ಭಗತ್ ಸಿಂಗ್ ಅವರ 120ನೇ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಬಾಲು ರಾಠೋಡ, ಭಗತ್ ಸಿಂಗ್ ಅವರು ಬದುಕಿದ್ದು ಕೇವಲ 23 ವರ್ಷವಾದರೂ (27 ಸೆಪ್ಟೆಂಬರ್ 1907 ರಿಂದ 23 ಮಾರ್ಚ್ 1931 – ಬ್ರಿಟಿಷರು ನೇಣುಗಂಬಕ್ಕೇರಿಸಿದ ದಿನ), ಅವರ ಹೋರಾಟದ ಹಾದಿ, ಚಿಕ್ಕ ವಯಸ್ಸಿನಲ್ಲಿಯೇ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಧೈರ್ಯ ಹಾಗೂ ಆಳವಾದ ಅಧ್ಯಯನ ಜಗತ್ತಿನ ಎಲ್ಲಾ ಯುವಜನರಿಗೆ ಆದರ್ಶನೀಯವಾಗಿದೆ. ನಿಜವಾದ ದೇಶಪ್ರೇಮವೆಂದರೆ ಇವರದ್ದು. ಸ್ವಾತಂತ್ರ್ಯ ಹೋರಾಟದಲ್ಲಿ ಇವರು ಎತ್ತಿದ ಪೂರ್ಣ ಸ್ವಾತಂತ್ರ್ಯದ ಪರಿಕಲ್ಪನೆ, ಸ್ವಾತಂತ್ರ್ಯ ಗಳಿಸಿ 7 ದಶಕಗಳು ಕಳೆದರೂ ಇನ್ನೂ ಗಳಿಸಲು ಸಾಧ್ಯವಾಗಿಲ್ಲ. ಎಲ್ಲರಿಗೂ ಶಿಕ್ಷಣ, ಉದ್ಯೋಗ, ಆರೋಗ್ಯ, ಸೂರು ಹಾಗೂ ಎಲ್ಲರೂ ನೆಮ್ಮದಿಯಿಂದ ಬದುಕುವ ವಾತಾವರಣವನ್ನು ನಿರ್ಮಿಸುವ ಸ್ವಾತಂತ್ರ್ಯದ ಆಶಯ ಇಂದಿಗೂ ನನಸಾಗದೆ ಉಳಿದಿದೆ ಎಂದು ಹೇಳಿದರು.

ಇಂದಿನ ಯುವಜನರಿಗೆ ಸಿನಿಮಾ ನಟ–ನಟಿಯರು, ರಾಜಕಾರಣಿಗಳು, ಬಂಡವಾಳಗಾರರು ಹಾಗೂ ಸೆಲೆಬ್ರಿಟಿಗಳು ಆದರ್ಶವಾಗುತ್ತಿದ್ದಾರೆ. ಆದರೆ ನಿಜವಾಗಿಯೂ ಯುವಜನರಿಗೆ ಭಗತ್ ಸಿಂಗ್ ಅವರಂತಹ ದೇಶಪ್ರೇಮಿಗಳು ಆದರ್ಶವಾಗಬೇಕಿದೆ. ಅವರು ಎತ್ತಿದ 'ಸಮಾಜವಾದ ಚಿರಾಯುವಾಗಲಿ, ಸಾಮ್ರಾಜ್ಯಶಾಹಿ ನಾಶವಾಗಲಿ' ಎಂಬ ಕೂಗನ್ನು ಇಂದಿನ ಯುವಜನತೆ ಮತ್ತೆ ಮೊಳಗಿಸಬೇಕಿದೆ. ಯುವಜನತೆ ಎದುರಿಸುತ್ತಿರುವ ನಿರುದ್ಯೋಗ, ಭ್ರಷ್ಟಾಚಾರ, ಮೂಲಭೂತವಾದ ಮುಂತಾದ ಗಂಭೀರ ಸಮಸ್ಯೆಗಳು ಉಲ್ಬಣಗೊಳ್ಳಲು ನಾವ್ಯಾರೂ ಭಗತ್ ಸಿಂಗ್ ಅವರನ್ನು ಸರಿಯಾಗಿ ಅಧ್ಯಯನ ಮಾಡದಿರುವುದೇ ಮುಖ್ಯ ಕಾರಣ. ಇನ್ನು ಮುಂದೆಯಾದರೂ ಅವರ ಚಿಂತನೆಗಳನ್ನು ಅಧ್ಯಯನ ಮಾಡಿ, ಮೈಗೂಡಿಸಿಕೊಳ್ಳಬೇಕಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಕೂಲಿಕಾರ ಸಂಘದ ಜಿಲ್ಲಾ ಮುಖಂಡರಾದ ಬಾಲು ರಾಠೋಡ, ಸಿಐಟಿಯು ಜಿಲ್ಲಾ ಸಂಚಾಲಕರಾದ ಮಹೇಶ್ ಹಿರೇಮಠ, ಬಿಸಿ ಊಟ ನೌಕರರ ರಾಜ್ಯ ಮುಖಂಡರಾದ ಲಕ್ಷ್ಮೀದೇವಿ, ಎಸ್‌ಎಫ್‌ಐ ತಾಲೂಕು ಅಧ್ಯಕ್ಷರಾದ ಅನಿಲ್ ರಾಠೋಡ ಹಾಗೂ ತನುಜಾ ರಾಯಬಾಗಿ, ಶರಣು ಮಾಟರಂಗಿ, ಮಾಂತೇಶ್ ಮಾದರ, ರವಿ ಮಾದಿ, ಪ್ರೇಮಕುಮಾರ್ ರಾಠೋಡ್, ರಮೇಶ್ ಬಡಿಗೇರ್, ವಿಜಯ್ ಚೌಹಾನ್ ಮುಂತಾದವರು ಭಾಗವಹಿಸಿದ್ದರು.




# ಸರ್ಕಾರದ ನಿರ್ಲಕ್ಷ್ಯ ಮುಂದುವರಿದರೆ ಹೋರಾಟ ತೀವ್ರ: ಅತಿಥಿ ಉಪನ್ಯಾಸಕರ ಸಂಘ ಎಚ್ಚರಿಕೆ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಉದ್ಯೋಗ ಹಾಗೂ ಸೇವಾ ಭದ್ರತೆ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಆಗ್ರಹಿಸಿದೆ.




ನಗರದಲ್ಲಿ ಸೋಮವಾರ ಸಂಘದ ಗದಗ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಡಾ. ಹನುಮಂತಗೌಡ ಆರ್. ಕಲ್ಮನಿ, ಶೈಕ್ಷಣಿಕ ಸಂಯೋಜಕರ ನೇಮಕಾತಿ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬದ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಯಂತೆ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ವಿಚಾರದಲ್ಲಿ ವಿಳಂಬ ಮಾಡುತ್ತಿದೆ. ಅತಿಥಿ ಉಪನ್ಯಾಸಕರ ಉದ್ಯೋಗ ಹಾಗೂ ಸೇವಾ ಭದ್ರತೆಯ ಕುರಿತು ಸರ್ಕಾರ ಸಮರ್ಪಕ ಕ್ರಮ ಕೈಗೊಳ್ಳದ ಪರಿಣಾಮ ಸಾವಿರಾರು ಅತಿಥಿ ಉಪನ್ಯಾಸಕರು ಅನಿಶ್ಚಿತತೆಯಲ್ಲೇ ಸೇವೆ ಸಲ್ಲಿಸುವಂತಾಗಿದೆ ಎಂದು ಅವರು ಹೇಳಿದರು.

ಶೈಕ್ಷಣಿಕ ಸಂಯೋಜಕರ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಿ, ಅರ್ಹ ಅತಿಥಿ ಉಪನ್ಯಾಸಕರಿಗೆ ನ್ಯಾಯಯುತ ಅವಕಾಶ ಕಲ್ಪಿಸುವ ಮೂಲಕ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಸಂಘ ಒತ್ತಾಯಿಸಿದೆ.

ಅಲ್ಲದೆ, 2009ರೊಳಗೆ ಪಡೆದಿರುವ ಎಂ.ಫಿಲ್ ಪದವಿಯನ್ನು ಯುಜಿಸಿ ಅರ್ಹತೆಯ ಮಾನದಂಡವಾಗಿ ಪರಿಗಣಿಸಬೇಕು. ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸರ್ಕಾರ ಶೈಕ್ಷಣಿಕ ಸಂಯೋಜಕರ ನೇಮಕಾತಿ ಹಾಗೂ ಅತಿಥಿ ಉಪನ್ಯಾಸಕರ ಸೇವಾ ಭದ್ರತೆಯ ವಿಚಾರದಲ್ಲಿ ಇದೇ ರೀತಿಯ ನಿರ್ಲಕ್ಷ್ಯ ಮುಂದುವರಿಸಿದರೆ ಸಂಘ ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಿದೆ. ವಿವಿಧ ಬೇಡಿಕೆಗಳ ಕುರಿತು ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳದಿದ್ದಲ್ಲಿ ವಿಧಾನಪರಿಷತ್ತಿಗೆ ನಡೆಯುವ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಮತದಾನ ಬಹಿಷ್ಕಾರದ ನಿರ್ಧಾರ ಕೈಗೊಳ್ಳುವ ಕುರಿತು ಸಂಘದ ನಿಲುವನ್ನು ಪ್ರಕಟಿಸಲಾಗಿದೆ ಎಂದು ಡಾ. ಹನುಮಂತಗೌಡ ಆರ್. ಕಲ್ಮನಿ ತಿಳಿಸಿದರು.

ಅತಿಥಿ ಉಪನ್ಯಾಸಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವುದು, ಶೈಕ್ಷಣಿಕ ಸಂಯೋಜಕರ ನೇಮಕಾತಿಯನ್ನು ಯಾವುದೇ ವಿಳಂಬವಿಲ್ಲದೆ ಪೂರ್ಣಗೊಳಿಸುವುದು ಹಾಗೂ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸಂಘ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಶಿಕಲಾ ಜೋಳದ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಗದಗ ಜಿಲ್ಲಾ ಘಟಕದ ಪ್ರಮುಖರು ಉಪಸ್ಥಿತರಿದ್ದರು.

# ವೀರಮಾತೆ ಕಿತ್ತೂರು ರಾಣಿ ಚನ್ನಮ್ಮ ಪಂಚಮಸಾಲಿ ಸಮಾಜ ನೂತನ ಅಧ್ಯಕ್ಷರ ಆಯ್ಕೆ

**ನಗರ ಘಟಕದ ಅಧ್ಯಕ್ಷರಾಗಿ ಅಮರೇಶ ಮಾರನಬಸರಿ । ಯುವ ಘಟಕದ ಅಧ್ಯಕ್ಷರಾಗಿ–ಮಂಜುನಾಥ ಸಂಗನಾಳ ಆಯ್ಕೆ**

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಪಟ್ಟಣದ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಭಾನುವಾರ ವೀರಮಾತೆ ಕಿತ್ತೂರು ರಾಣಿ ಚನ್ನಮ್ಮ ಪಂಚಮಸಾಲಿ ಸಮಾಜ ಗಜೇಂದ್ರಗಡ–ಉಣಚಗೇರಿ ಇದರ ನೂತನ ಪದಾಧಿಕಾರಿಗಳ ಆಯ್ಕೆ ಸಭೆ ಜರುಗಿತು.

ಈ ಸಂದರ್ಭದಲ್ಲಿ ನಗರ ಘಟಕದ ನೂತನ ಅಧ್ಯಕ್ಷರಾಗಿ ಅಮರೇಶ ಮಾರನಬಸರಿ ಹಾಗೂ ಯುವ ಘಟಕದ ಅಧ್ಯಕ್ಷರಾಗಿ ಮಂಜುನಾಥಸಂಗನಾಳಅವರನ್ನುಅವಿರೋಧವಾಗಿಆಯ್ಕೆಮಾಡಲಾಯಿತು.





ಸಂದರ್ಭದಲ್ಲಿ ಮಾತನಾಡಿದ ಸಮಾಜದ ಮುಖಂಡ ಚಂಬಣ್ಣ ಚವಡಿ, "ಸಮಾಜದ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಮಹತ್ವದ ಹೆಜ್ಜೆಯಾಗಿದೆ. ನೂತನ ಅಧ್ಯಕ್ಷರು ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಯುವಕರನ್ನು ಒಗ್ಗೂಡಿಸಿ, ಸಮಾಜದ ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಸಮಾಜದ ಏಳಿಗೆಗೆ ಎಲ್ಲರೂ ಕೈಜೋಡಿಸಬೇಕು" ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ನೂತನ ನಗರ ಘಟಕದ ಅಧ್ಯಕ್ಷ ಅಮರೇಶ ಮಾರನಬಸರಿ ಹಾಗೂ ಯುವ ಘಟಕದ ಅಧ್ಯಕ್ಷ ಮಂಜುನಾಥ ಸಂಗನಾಳ, "ಸಮಾಜದ ಹಿರಿಯರು ನಮ್ಮ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿರುವುದು ಸಂತಸ ತಂದಿದೆ. ಸಮಾಜದ ಸಂಘಟನೆಯನ್ನು ಬಲಪಡಿಸುವುದರ ಜತೆಗೆ ಯುವಕರನ್ನು ಒಗ್ಗೂಡಿಸಿ, ಸಮಾಜದ ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಆದ್ಯತೆ ನೀಡುತ್ತೇವೆ. ಸಮಾಜದ ಅಭಿವೃದ್ಧಿಗಾಗಿ ಎಲ್ಲರ ಸಹಕಾರದೊಂದಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಭು ಚವಡಿ, ಟಿ. ಎಸ್. ರಾಜೂರು, ಬಸವರಾಜ ಪುರ್ತಗೇರಿ, ಮುತ್ತಣ್ಣ ಮ್ಯಾಗೇರಿ, ಕಳಕಪ್ಪ ಸಂಗನಾಳ, ಕಳಕಪ್ಪ ಅಬ್ಬಿಗೇರಿ, ಬಸಪ್ಪ ಬನಿಗೋಳ, ಮಲ್ಲಿಕಾರ್ಜುನ ಕುಂದಗೋಳ, ಶಿವರಾಜ ಬಂಡಿ, ಬಸವರಾಜ ಕಡಬಲಕಟ್ಟಿ, ಶರಣಪ್ಪ ದಿಂಡೂರ, ರಮೇಶ ಮಾರನಬಸರಿ, ರಾಕೇಶ ಮಾರನಬಸರಿ, ಸೇರಿದಂತೆ ಇತರರು ಇದ್ದರು.

# ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗೆ ಸುಸ್ಥಿರ ಕೃಷಿಗೆ ಒತ್ತು

**ಧಾರವಾಡ ಕೃಷಿ ಮೇಳದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಲಂಬೂನವರ**

**ಸತ್ಯಮಿಥ್ಯ ಸುದ್ದಿಮೂಲ ಧಾರವಾಡ:**
ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯೊಂದಿಗೆ ಕೃಷಿ ಉತ್ಪಾದಕತೆ ಹಾಗೂ ರೈತರ ಆದಾಯ ಹೆಚ್ಚಿಸಲು ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ಪ್ರಗತಿಪರ ರೈತ ಹಾಗೂ ಪಿಎಚ್.ಡಿ. ಪದವೀಧರ ಡಾ. ಶೌಕತ್ ಅಲಿ ಲಂಬೂನವರ ಹೇಳಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿರುವ ಕೃಷಿ ಮೇಳದ ಅಂಗವಾಗಿ ಸೆ. 27ರಂದು ನಡೆದ "ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಗಾಗಿ ಸುಸ್ಥಿರ ಕೃಷಿ" ವಿಷಯದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ರೈತರನ್ನುದ್ದೇಶಿಸಿ ಮಾತನಾಡಿದರು.

ತಮ್ಮ ಕೃಷಿ ಅನುಭವ ಹಾಗೂ ಅಧ್ಯಯನದ ಆಧಾರದ ಮೇಲೆ ಮಾತನಾಡಿದ ಅವರು, ಮಣ್ಣು, ನೀರು, ಜೀವವೈವಿಧ್ಯ ಹಾಗೂ ಕೃಷಿ ಪರಿಸರದ ಸಂರಕ್ಷಣೆಯ ಮಹತ್ವವನ್ನು ವಿವರಿಸಿದರು. ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಉತ್ಪಾದನೆ ಹಾಗೂ ರೈತರ ಆದಾಯವನ್ನು ಸಮತೋಲನದಲ್ಲಿಡುವ ಕೃಷಿ ಪದ್ಧತಿಗಳ ಅಗತ್ಯವಿದೆ ಎಂದರು.

"ಮಣ್ಣು ಉಳಿದರೆ ಕೃಷಿ ಉಳಿಯುತ್ತದೆ; ನೀರು ಉಳಿದರೆ ರೈತನ ಬದುಕು ಉಳಿಯುತ್ತದೆ" ಎಂಬ ಸಂದೇಶ ನೀಡಿದ ಡಾ. ಶೌಕತ್ ಅಲಿ ಲಂಬೂನವರ, ಮಣ್ಣಿನ ಆರೋಗ್ಯ ಕಾಪಾಡುವುದು, ನೀರಿನ ಮಿತಬಳಕೆ, ಸಾವಯವ ಪದಾರ್ಥಗಳ ಬಳಕೆ, ಬೆಳೆ ವೈವಿಧ್ಯತೆ, ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ ಹಾಗೂ ಪರಿಸರ ಸ್ನೇಹಿ ಕೃಷಿ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ರೈತರಿಗೆ ಕರೆ ನೀಡಿದರು.

ಸುಸ್ಥಿರ ಕೃಷಿ ಎನ್ನುವುದು ಕೇವಲ ಇಂದಿನ ಬೆಳೆ ಉತ್ಪಾದನೆಗೆ ಸೀಮಿತವಾಗಿರದೆ, ಮುಂದಿನ ಪೀಳಿಗೆಗೆ ಫಲವತ್ತಾದ ಮಣ್ಣು, ಶುದ್ಧ ನೀರು ಹಾಗೂ ಸಮೃದ್ಧ ಪರಿಸರವನ್ನು ಉಳಿಸುವ ಜವಾಬ್ದಾರಿಯೂ ಆಗಿದೆ. ವಿಜ್ಞಾನ, ಕೃಷಿ ಅನುಭವ ಹಾಗೂ ಪ್ರಕೃತಿಯ ಸಮತೋಲನವನ್ನು ಸಮನ್ವಯಗೊಳಿಸಿ ಕೃಷಿ ಕೈಗೊಂಡಾಗ ಭವಿಷ್ಯದ ಕೃಷಿ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಡಾ. ಶೌಕತ್ ಅಲಿ ಲಂಬೂನವರ ಅವರ ಕೃಷಿ ಅನುಭವ ಹಾಗೂ ಸುಸ್ಥಿರ ಕೃಷಿ ಕುರಿತ ಮಾರ್ಗದರ್ಶನವನ್ನು ಗೌರವಿಸಿ ಧಾರವಾಡ ಜಿಲ್ಲಾ ಕೃಷಿ ಅಧಿಕಾರಿಗಳ ವತಿಯಿಂದ ಸನ್ಮಾನಿಸಲಾಯಿತು.



**ಯುವ ರೈತರಿಗೆ ಮಾದರಿ: ದಾಟನಾಳ ಯುವ ಮಾಂತೇಶ್ ನಾಯ್ಕರ್**

**ಡಾ. ಶೌಕತ್ ಅಲಿ ಲಂಬೂನವರ ಅವರು ರೈತರಿಗೆ ನೀಡಿದ ಸುಸ್ಥಿರ ಕೃಷಿ ಕುರಿತ ಮಾಹಿತಿ ಹಾಗೂ ಮಾರ್ಗದರ್ಶನ ಯುವ ರೈತರಿಗೆ ಉಪಯುಕ್ತವಾಗಿದ್ದು, ಅವರ ಕೃಷಿ ಅನುಭವ ಯುವ ಪೀಳಿಗೆಗೆ ಮಾದರಿಯಾಗಿದೆ ಎಂದು ದಾಟ್ನಾಳದ ಯುವ ರೈತ ಮಾಂತೇಶ್ ನಾಯ್ಕರ್ ಅಭಿಪ್ರಾಯಪಟ್ಟರು.**

ಕೃಷಿ ಕ್ಷೇತ್ರದಲ್ಲಿ ಶಿಕ್ಷಣ, ವಿಜ್ಞಾನ ಹಾಗೂ ಪ್ರಾಯೋಗಿಕ ಅನುಭವವನ್ನು ಸಮನ್ವಯಗೊಳಿಸಿ ರೈತ ಸಮುದಾಯಕ್ಕೆ ಉಪಯುಕ್ತವಾದ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದ ಡಾ. ಶೌಕತ್ ಅಲಿ ಲಂಬೂನವರ ಅವರ ಭಾಗವಹಿಸುವಿಕೆ ಕೃಷಿ ಮೇಳಕ್ಕೆ ವಿಶೇಷ ಮೆರುಗು ನೀಡಿತು.

# ಕೊರಮಾ (ಭಜಂತ್ರಿ) ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಘಟಕ ರಚನೆ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ನಗರದ ಬೆಟಗೇರಿ ಶಿವರತ್ನ ಪ್ಯಾಲೇಸ್‌ನಲ್ಲಿ ಶ್ರೀ ನೊಲ ಚಂದಯ್ಯ ಕೊರಮಾ (ಭಜಂತ್ರಿ) ಕ್ಷೇಮಾಭಿವೃದ್ಧಿ ಸಂಘ, ಗದಗ ಜಿಲ್ಲಾ ಘಟಕದ ವತಿಯಿಂದ ಪೂರ್ವಭಾವಿ ಸಭೆ ನಡೆಯಿತು.

ಗದಗ–ಬೆಟಗೇರಿ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳ ಭಜಂತ್ರಿ ಸಮಾಜದ ಮುಖಂಡರು ಹಾಗೂ ಕುಲಬಾಂಧವರು ಹಿರಿಯರ ಮಾರ್ಗದರ್ಶನದಲ್ಲಿ ಸಭೆಯಲ್ಲಿ ಪಾಲ್ಗೊಂಡು, ಸರ್ವಾನುಮತದಿಂದ ಗದಗ ತಾಲೂಕು ಕೊರಮಾ (ಭಜಂತ್ರಿ) ಕ್ಷೇಮಾಭಿವೃದ್ಧಿ ಸಂಘವನ್ನು ರಚಿಸಿದರು.

ಸಂಘದ ಅಧ್ಯಕ್ಷರಾಗಿ ಹುಚ್ಚಪ್ಪ ಭಜಂತ್ರಿ, ಉಪಾಧ್ಯಕ್ಷರಾಗಿ ರಾಜು ಭಜಂತ್ರಿ, ಉಮೇಶ್ ಭಜಂತ್ರಿ ರವಿಕುಮಾರ್ ಭಜಂತ್ರಿ ಹಾಗೂ ಲಕ್ಷ್ಮಣ ಭಜಂತ್ರಿ, ಕಾರ್ಯದರ್ಶಿಯಾಗಿ ನಾಗರಾಜ ಭಜಂತ್ರಿ, ಸಹ ಕಾರ್ಯದರ್ಶಿಗಳಾಗಿ ಪರಶುರಾಮ ಭಜಂತ್ರಿ ಹಾಗೂ ಶರಣಪ್ಪ ಭಜಂತ್ರಿ, ಖಜಾಂಚಿಯಾಗಿ ಹನುಮಂತಪ್ಪ ಭಜಂತ್ರಿ ಹಾಗೂ ಗೌರವ ಕಾರ್ಯಾಧ್ಯಕ್ಷರಾಗಿ ಬಾಲಪ್ಪ ಭಜಂತ್ರಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಶರಣಪ್ಪ ಭಜಂತ್ರಿ ನೆರವೇರಿಸಿದರು. ಸಭೆಯನ್ನುದ್ದೇಶಿಸಿ ಹಿರಿಯ ವಕೀಲರಾದ ಮೋಹನ್ ಭಜಂತ್ರಿ, ಶಿಕ್ಷಕರಾದ ಶಾಂತಕುಮಾರ್ ಭಜಂತ್ರಿ, ವೈ.ಕೆ. ಭಜಂತ್ರಿ ಹಾಗೂ ಶಿವಾನಂದ ಭಜಂತ್ರಿ ಮಾತನಾಡಿ, ಸಮಾಜದ ಸಂಘಟನೆ, ಅಭಿವೃದ್ಧಿ ಹಾಗೂ ಯುವಜನರ ಪ್ರಗತಿಗೆ ಒಗ್ಗಟ್ಟಿನಿಂದ ಶ್ರಮಿಸುವ ಅಗತ್ಯದ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಗದಗ–ಬೆಟಗೇರಿ ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕುಗಳ ಭಜಂತ್ರಿ ಸಮಾಜದ ಕುಲಬಾಂಧವರು ಉಪಸ್ಥಿತರಿದ್ದರು.

ಸತ್ಯ ಮಿಥ್ಯ

SATY MITHI
Kannada Daily Morning

# ಮೂರ್ತಿ ತೆರವಿಗೆ ಕುಮ್ಮಕ್ಕು ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಿ: ಪ್ರಭು ಚವಡಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮನವರ ಮೂರ್ತಿ ತೆರವುಗೊಳಿಸಲು ಪ್ರಯತ್ನಿಸಿದ ಅಧಿಕಾರಿಗಳು ಹಾಗೂ ಅದಕ್ಕೆ ಕುಮ್ಮಕ್ಕು ನೀಡಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳದಿರುವುದು ಖಂಡನೀಯ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಪ್ರಭು ಚವಡಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಮೈಸೂರು ಮಠದಲ್ಲಿ ಭಾನುವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ವತಿಯಿಂದ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಭಗತ್ ಸಿಂಗ್ ಸೇರಿದಂತೆ ಅನೇಕ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ ಹಾಗೂ ಹೋರಾಟದ ಫಲವಾಗಿ ಇಂದು ದೇಶದ ಜನರು ಸ್ವತಂತ್ರವಾಗಿ ಬದುಕುತ್ತಿದ್ದಾರೆ. ಇಂತಹ ಮಹನೀಯರ ಮೂರ್ತಿಗಳನ್ನು ತೆರವುಗೊಳಿಸಲು ಅಧಿಕಾರ ನೀಡಿದವರು ಯಾರು? ಅಧಿಕಾರಿಗಳು ಯಾರ ಕುಮ್ಮಕ್ಕಿನಿಂದ ಈ ಕಾರ್ಯಕ್ಕೆ ಮುಂದಾಗಿದ್ದಾರೆ? ಯಾವ ಕಾರಣಕ್ಕಾಗಿ ಮೂರ್ತಿ ತೆರವಿಗೆ ಪ್ರಯತ್ನಿಸಲಾಗಿದೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.



ಮೂರ್ತಿ ತೆರವಿಗೆ ಯಾರಾದರೂ ಒತ್ತಡ ಹೇರಿದ್ದರೆ ಅಥವಾ ಸೂಚನೆ ನೀಡಿದ್ದರೆ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕು. ಮಹನೀಯರ ಮೂರ್ತಿಗಳು ಕೇವಲ ಪ್ರತಿಮೆಗಳಲ್ಲ, ಅವು ನಮ್ಮ ನಾಡಿನ ಇತಿಹಾಸ, ಸ್ವಾಭಿಮಾನ ಹಾಗೂ ಜನರ ಭಾವನೆಗಳ ಪ್ರತೀಕವಾಗಿವೆ. ಇಂತಹ ಮೂರ್ತಿಗಳ ತೆರವಿಗೆ ಮುಂದಾಗುವ ಮೂಲಕ ಸಾರ್ವಜನಿಕರ ಭಾವನೆಗಳಿಗೆ ಧಕ್ಕೆ ಉಂಟುಮಾಡಿರುವ ಅಧಿಕಾರಿಗಳು ಹಾಗೂ ಅವರಿಗೆ ಕುಮ್ಮಕ್ಕು ನೀಡಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಹಾಸಭಾದ ರಾಜ್ಯ ಮಹಿಳಾ ಸಹ ಕಾರ್ಯದರ್ಶಿ ಕವಿತಾ ಜಾಲಿಹಾಳ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ ರೇವಡಿ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಗೀತಾ ವಾಲಿ, ಯುವ ಘಟಕದ ಅಧ್ಯಕ್ಷ ಶಿವಕುಮಾರ ಶಶಿಮಠ, ಟಿ.ಎಸ್. ರಾಜೂರು, ಗುರುಸಿದ್ದಯ್ಯ ಸುಗಿರಯ್ಯನಮಠ, ಶರಣಪ್ಪ ರೇವಡಿ, ಬಸವರಾಜ ಪುರ್ತಗೇರಿ, ಬಸವರಾಜ ಶೀಲವಂತರ, ಕಳಕಪ್ಪ ಪಟ್ಟಣಶೆಟ್ಟಿ, ಅವಿನಾಶ ಮತ್ತಿಕಟ್ಟಿ, ಅಮರಯ್ಯ ಗೌರಿಮಠ, ಭೀಮಣ್ಣ ಮ್ಯಾಗೇರಿ, ಮಲ್ಲಿಕಾರ್ಜುನ ಕುಂದಗೋಳ, ಗುರಲಿಂಗಯ್ಯ ಹಿರೇಮಠ, ಬಸವರಾಜ ಕುರುಮನಾಳ, ರೇಣುಕಾ ಪಾಟೀಲ, ಸುಕನ್ಯಾ ಹೊಗರಿ, ಗವಿಸಿದ್ದಮ್ಮ ಹಡಪದ, ಲಕ್ಷ್ಮೀ ಮೆಣಸಿನಕಾಯಿ, ಶಿವು ಅರಳಿ, ಭರತ ನೂಲ್ವಿ, ಹುಚ್ಚಪ್ಪ ಹಾವೇರಿ, ಪ್ರಭುಲಿಂಗಯ್ಯ ಹಿರೇಮಠ, ಬಸವರಾಜ ಮಾಳಗಿ ಮತ್ತಿತರರು ಇದ್ದರು.

## ಮನ–ಮನಗಳಲ್ಲಿ ಬಸವ ತತ್ವ ಬೆಳಗಿದಾಗ ಸಮ ಸಮಾಜ ನಿರ್ಮಾಣ ಸಾಧ್ಯ: ಸಿ.ವಿ. ವಂಕಲಕುಂಟಿ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಮನೆಯಲ್ಲಿ ಬೆಳಗಿದ ದೀಪದ ಬೆಳಕು ಮನೆಯನ್ನಷ್ಟೇ ಬೆಳಗಿಸದೆ ಸುತ್ತಲಿನ ಕತ್ತಲೆಯನ್ನೂ ದೂರ ಮಾಡುತ್ತದೆ. ಅದೇ ರೀತಿ ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ ಹಾಗೂ ವೈಚಾರಿಕತೆಯ ತತ್ವಗಳು ಪ್ರತಿಯೊಬ್ಬರ ಮನದಲ್ಲಿ ಬೆಳಗಿದಾಗ ಇಡೀ ಸಮಾಜವೇ ಬೆಳಕಿನ ಹಾದಿಯಲ್ಲಿ ಸಾಗಲು ಸಾಧ್ಯ ಎಂದು ನಿವೃತ್ತ ಮುಖ್ಯ ಶಿಕ್ಷಕ ಸಿ.ವಿ. ವಂಕಲಕುಂಟಿ ಹೇಳಿದರು.

ಪಟ್ಟಣದ ಮಹಾಂತೇಶ ವೀರಪ್ಪ ಕತ್ತಿಶೆಟ್ಟರ ಅವರ ಮನೆಯಲ್ಲಿ ಭಾನುವಾರ ನರೇಗಲ್ಲಕೋಡಿಕೊಪ್ಪ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಡೆದ 'ಮನೆಯಲ್ಲಿ ಮಹಾಮನೆ' ಮಾಸಿಕ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬಸವಣ್ಣನವರ ಚಿಂತನೆ ಕೇವಲ ವಚನಗಳಲ್ಲಿ ಉಳಿಯುವ ಮಾತಲ್ಲ; ಅದು ಪ್ರತಿಯೊಬ್ಬರೂ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯವಾಗಿದೆ. 'ಹುಟ್ಟಿನಿಂದ ಯಾರೂ ಮೇಲಲ್ಲ, ಯಾರೂ ಕೆಳಗಲ್ಲ' ಎಂಬ ಸಮಾನತೆಯ ಸಂದೇಶ ಅಂದಿನ ಸಮಾಜಕ್ಕೆ ಎಷ್ಟು ಅಗತ್ಯವಾಗಿತ್ತೋ, ಇಂದಿಗೂ ಅಷ್ಟೇ ಪ್ರಸ್ತುತವಾಗಿದೆ. ಜಾತಿ–ಮತದ ಗೋಡೆಗಳನ್ನು ಮೀರಿ ಪ್ರತಿಯೊಬ್ಬ ಮನುಷ್ಯನನ್ನೂ ಮನುಷ್ಯನಾಗಿ ಕಾಣುವ ದೃಷ್ಟಿಕೋನವೇ ಬಸವ ತತ್ವದ ಜೀವಾಳವಾಗಿದೆ ಎಂದರು.

ಸಮಾಜದಲ್ಲಿ ವಿಭಜನೆಗೆ ಕಾರಣವಾಗಿದ್ದ ಅನೇಕ ಆಚರಣೆಗಳ ನಡುವೆ ಬಸವಣ್ಣನವರು ಪ್ರಶ್ನಿಸುವ ಮನೋಭಾವ, ವೈಚಾರಿಕತೆ ಹಾಗೂ ಮಾನವೀಯ ಮೌಲ್ಯಗಳಿಗೆ ಮಹತ್ವ ನೀಡಿದರು. ಕಾಯಕ ಮಾಡದೆ ಬದುಕಬಾರದು. ಪ್ರತಿಯೊಬ್ಬರೂ ತಮ್ಮ ದುಡಿಮೆಯನ್ನು ಗೌರವದಿಂದ ಮಾಡುತ್ತಾ, ಕಾಯಕದ ಫಲವನ್ನು ದಾಸೋಹದ ಮೂಲಕ ಸಮಾಜದೊಂದಿಗೆ ಹಂಚಿಕೊಳ್ಳಬೇಕು ಎಂಬ ಬಸವಣ್ಣನವರ ಸಂದೇಶ ಇಂದಿನ ಪೀಳಿಗೆಗೂ ದಾರಿದೀಪವಾಗಿದೆ ಎಂದು ಹೇಳಿದರು.

ಕಾಯಕ ಮನುಷ್ಯನಿಗೆ ಸ್ವಾಭಿಮಾನ ನೀಡಿದರೆ, ದಾಸೋಹ ಸಮಾಜದೊಂದಿಗೆ ಬಾಂಧವ್ಯ ಬೆಸೆಯುತ್ತದೆ. ಸಮಾನತೆ ಸಹಬಾಳ್ವೆಗೆ ದಾರಿ ತೋರಿಸಿದರೆ, ವೈಚಾರಿಕತೆ ಉತ್ತಮ ಸಮಾಜ ನಿರ್ಮಾಣಕ್ಕೆ ದಿಕ್ಕು ನೀಡುತ್ತದೆ. ಬಸವ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ವೈಯಕ್ತಿಕ ನೆಮ್ಮದಿಯ ಜತೆಗೆ ಸಮಾಜದಲ್ಲಿ ಪರಸ್ಪರ ವಿಶ್ವಾಸ, ಸಹಕಾರ ಹಾಗೂ ಸೌಹಾರ್ದವೂ ವೃದ್ಧಿಸುತ್ತದೆ ಎಂದು ಅಭಿಪ್ರಾಯಪಟ್ಟರು.

'ಮನೆ–ಮನೆಗಳಲ್ಲಿ ಮಹಾಮನೆ, ಮನ–ಮನಗಳಲ್ಲಿ ಬಸವ ತತ್ವ' ಎಂಬ ಆಶಯದೊಂದಿಗೆ ನಡೆಯುತ್ತಿರುವ ಇಂತಹ ಸಭೆಗಳು ಕೇವಲ ಮಾಸಿಕ ಕಾರ್ಯಕ್ರಮಗಳಾಗಿ ಉಳಿಯದೆ, ಕುಟುಂಬಗಳನ್ನು ಮೌಲ್ಯಗಳೊಂದಿಗೆ ಬೆಸೆಯುವ ಹಾಗೂ ಸಮಾಜದಲ್ಲಿ ಉತ್ತಮ ಚಿಂತನೆಗಳನ್ನು ಬೆಳೆಸುವ ವೇದಿಕೆಗಳಾಗಬೇಕು ಎಂದರು.

ಸಭೆಯಲ್ಲಿ ಬಸವಾದಿ ಶರಣರ ವಚನಗಳನ್ನು ಪಠಿಸುವ ಮೂಲಕ ಶರಣರ ಚಿಂತನೆಗಳನ್ನು ಸ್ಮರಿಸಲಾಯಿತು. ನಿವೃತ್ತ ಶಿಕ್ಷಕ ಗುರುಪಾದಪ್ಪ ಬೆಲ್ಲದ ಅವರು ಬಸವಣ್ಣನವರ ವಚನ ಸಾಹಿತ್ಯದ ಕುರಿತು ಮಾತನಾಡಿ ವಂದಿಸಿದರು.

ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಯೋಗಿ ಜಕ್ಕಲಿ ಅಧ್ಯಕ್ಷತೆ ವಹಿಸಿ, ಬಣಜಿಗ ಬಂಧುಗಳ ಒಗ್ಗಟ್ಟು, ಸಂಘಟನೆಯ ಜವಾಬ್ದಾರಿ ಹಾಗೂ ಸಮಾಜಮುಖಿ ಚಟುವಟಿಕೆಗಳ ಕುರಿತು ಮಾತನಾಡಿದರು. ಜಕ್ಕಲಿ ಗ್ರಾಮದ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚನ್ನಬಸಪ್ಪ ಸೂಡಿ ಹಾಗೂ ರೋಣ ತಾಲೂಕಿನ ಸಹಕಾರಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಮಲ್ಲಿಕಾರ್ಜುನ ಕುರುಡಗಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಉದ್ಯಮಿ ಬಸವರಾಜ ವಂಕಲಕುಂಟಿ ಸ್ವಾಗತಿಸಿದರು. ಸಹಕಾರಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಚಿದಾನಂದ ವಂಕಲಕುಂಟಿ ನಿರೂಪಿಸಿದರು. ಕಳೆದ ತಿಂಗಳು ನಡೆದ 'ಮನೆಯಲ್ಲಿ ಮಹಾಮನೆ' ಮಾಸಿಕ ಸಭೆಯ ಠರಾವನ್ನು ಓದಿ ಹೇಳಲಾಯಿತು.

ಮಹಾಮನೆಯ ಆತ್ಮೀಯ ವಾತಾವರಣದಲ್ಲಿ ನಡೆದ ಸಭೆಯಲ್ಲಿ ಬಣಜಿಗ ಸಮಾಜದ ಬಂಧುಗಳು ಪಾಲ್ಗೊಂಡು, ಬಸವ ತತ್ವಗಳನ್ನು ಕೇವಲ ಮಾತುಗಳಲ್ಲಿ ಸೀಮಿತಗೊಳಿಸದೆ ಬದುಕಿನ ಭಾಗವಾಗಿಸಿಕೊಳ್ಳುವ ಸಂಕಲ್ಪಕ್ಕೆ ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಬಸವರಾಜ ಜಕ್ಕಲಿ, ಸತೀಶ ಜೋಳದ, ಬಸಪ್ಪ ಉಪ್ಪಿನ, ಮಹಾಂತೇಶ ಉಪ್ಪಿನ, ರತ್ನಮ್ಮ ಬೆಲ್ಲದ, ಜಯಶ್ರೀ ಕತ್ತಿಶೆಟ್ಟರ್, ಸಾವಿತ್ರೆವ್ವ ಜಕ್ಕಲಿ, ಅನ್ನಪೂರ್ಣ ಕತ್ತಿಶೆಟ್ಟರ ಸೇರಿದಂತೆ ಸಮಾಜದ ಬಂಧುಗಳು ಉಪಸ್ಥಿತರಿದ್ದರು.



## ಜಾಬ್ ಕಾರ್ಡ್ ಮೇಳದ ಮೂಲಕ ಅರ್ಹ ಕೂಲಿಕಾರರಿಗೆ ಹೊಸ ಜಾಬ್ ಕಾರ್ಡ್ – ಕೂಲಿ ದರ 382ಕ್ಕೆ ಹೆಚ್ಚಳ

**ಸತ್ಯಮಿಥ್ಯ ಸುದ್ದಿಮೂಲ ಶಿರಹಟ್ಟಿ:**
ತಾಲೂಕಿನ ಮಾಗಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಕಸಿತ ಭಾರತ□ಗ್ಯಾರಂಟಿ ಫಾರ್ ರೋಜಗಾರ್ □□□ಂಡ್ ಆಜೀವಿಕ ಮಿಷನ್ (ಗ್ರಾಮೀಣ) ಯೋಜನೆಯ (ವಿಬಿ□ಜಿ ರಾಮ್ ಜಿ) ಅಂಗವಾಗಿ ಐಇಸಿ ಚಟುವಟಿಕೆಯನ್ನು ಹಮ್ಮಿಕೊಳ್ಳುವ ಮೂಲಕ ಕೂಲಿಕಾರರಿಗೆ ಯೋಜನೆಯ ಕುರಿತು ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಐಇಸಿ ಸಂಯೋಜಕರು ಮಾತನಾಡಿ, ವಿಬಿಜಿ ರಾಮ್ ಜಿ ಯೋಜನೆಯಡಿ ಜಾಬ್ ಕಾರ್ಡ್ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಅರ್ಹ ಕೂಲಿಕಾರರಿಗೆ ಹೊಸ ಜಾಬ್ ಕಾರ್ಡ್‌ಗಳನ್ನು ನೀಡಲಾಗುತ್ತಿದೆ. ಅರ್ಹ ಕೂಲಿಕಾರರು ಯೋಜನೆಯ ಸೌಲಭ್ಯಗಳನ್ನು ಪಡೆದುಕೊಂಡು ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕು ಐ ಇ ಸಿ ಸಂಯೋಜಕರು ಮಾತನಾಡಿ ಯೋಜನೆಯಡಿ ಕೂಲಿ ದರವನ್ನು □370ರಿಂದ □382ಕ್ಕೆ ಹೆಚ್ಚಿಸಿರುವುದು ಹಾಗೂ ಉದ್ಯೋಗದ ದಿನಗಳನ್ನು 100ರಿಂದ 125 ದಿನಗಳಿಗೆ ಹೆಚ್ಚಿಸಿರುವ ಕುರಿತು ಕೂಲಿಕಾರರಿಗೆ ಸಮಗ್ರ ಮಾಹಿತಿ ನೀಡಲಾಯಿತು. ಯೋಜನೆಯಡಿ ದೊರೆಯುವ ಉದ್ಯೋಗಾವಕಾಶಗಳು ಹಾಗೂ ಸೌಲಭ್ಯಗಳ ಕುರಿತು ಕೂಡ ವಿವರಿಸಲಾಯಿತು.

ಗ್ರಾಮೀಣ ಪ್ರದೇಶದ ಅರ್ಹ ಕೂಲಿಕಾರರು ಯೋಜನೆಯ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೂಲಕ ತಮ್ಮ ಜೀವನೋಪಾಯವನ್ನು ಸುಧಾರಿಸಿಕೊಳ್ಳಬೇಕು ಎಂದು



ಅಧಿಕಾರಿಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಿ ಬಿ ಜಿ ರಾಮ್ ಜಿ ಸಿಬ್ಬಂದಿಗಳು, ಪಂಚಾಯಿತಿ ಸಿಬ್ಬಂದಿ ಹಾಗೂ ಕೂಲಿಕಾರರು ಉಪಸ್ಥಿತರಿದ್ದರು.

## ಅಕ್ಷರ ಜಾತ್ರೆ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆಯಾಗಲಿ: ಮುಪ್ಪಿನ ಬಸವಲಿಂಗ ಶ್ರೀಗಳು

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ, ಸೃಜನಶೀಲತೆ ಹಾಗೂ ವಿವಿಧ ಕೌಶಲ್ಯಗಳನ್ನು ಗುರುತಿಸಿ, ಅವುಗಳ ಅನಾವರಣಕ್ಕೆ ಸೂಕ್ತ ವೇದಿಕೆ ಕಲ್ಪಿಸುವ ಮೂಲಕ ಅಕ್ಷರ ಜಾತ್ರೆಯನ್ನು ಅರ್ಥಪೂರ್ಣ ಶೈಕ್ಷಣಿಕ ಉತ್ಸವವನ್ನಾಗಿ ರೂಪಿಸಬೇಕು ಎಂದು ಹಾಲಕೆರೆಯ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ, ಪರಮಪೂಜ್ಯ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪದವಿ ಮಹಾವಿದ್ಯಾಲಯದ ಆಡಿಟೋರಿಯಂ ಭವನದಲ್ಲಿ ಸೆ.26ರಂದು ನಡೆದ ಅಕ್ಷರ ಜಾತ್ರೆ□2026ರ ಪೂರ್ವಭಾವಿ ಸಭೆಯಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಅಕ್ಷರ ಜಾತ್ರೆ ಕೇವಲ ಮನರಂಜನೆಯ ಕಾರ್ಯಕ್ರಮವಾಗದೆ, ವಿದ್ಯಾರ್ಥಿಗಳ ಜ್ಞಾನ, ಪ್ರತಿಭೆ, ಸೃಜನಶೀಲತೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ಶೈಕ್ಷಣಿಕ ವೇದಿಕೆಯಾಗಬೇಕು. ಗ್ರಾಮೀಣ ಪ್ರದೇಶದ ಮಕ್ಕಳಲ್ಲಿಯೂ ಅಪಾರ ಪ್ರತಿಭೆ ಅಡಗಿದ್ದು, ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಹಾಗೂ ಸಮಾಜದ ಮೇಲಿದೆ ಎಂದರು.

ಪಠ್ಯಜ್ಞಾನದ ಜತೆಗೆ ಕಲೆ, ಕ್ರೀಡೆ, ವಿಜ್ಞಾನ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿಯೂ ವಿದ್ಯಾರ್ಥಿಗಳು ಆಸಕ್ತಿ ಬೆಳೆಸಿಕೊಳ್ಳುವಂತೆ ಶಿಕ್ಷಕರು ಪ್ರೇರೇಪಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸುವುದು ಅಕ್ಷರ ಜಾತ್ರೆಯ ಪ್ರಮುಖ ಉದ್ದೇಶವಾಗಬೇಕು ಎಂದು ತಿಳಿಸಿದರು.

ನ.21 ಮತ್ತು 22ರಂದು ನಡೆಯಲಿರುವ ಅಕ್ಷರ ಜಾತ್ರೆಯಲ್ಲಿ



ಗ್ರಾಮೀಣ ಕ್ರೀಡೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಜ್ಞಾನ ಮತ್ತು ಕೈಗಾರಿಕಾ ವಸ್ತುಪ್ರದರ್ಶನ, ಹಳೆಯ ವಿದ್ಯಾರ್ಥಿಗಳ ಸಮಾವೇಶ ಹಾಗೂ ಉದ್ಯೋಗ ಮೇಳ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸಬೇಕು. ಜಾತ್ರೆಗೆ ಆಗಮಿಸುವ ವಿದ್ಯಾರ್ಥಿಗಳು ಹಾಗೂ ಮಕ್ಕಳ ಸುರಕ್ಷತೆಗೆ ವಿಶೇಷ ಆದ್ಯತೆ ನೀಡಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರತಿವರ್ಷ ನಡೆಯುವ ಅಕ್ಷರ ಜಾತ್ರೆ ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಬೇಕು. ಸಂಸ್ಥೆಯ ಎಲ್ಲ ಅಂಗ ಸಂಸ್ಥೆಗಳ ಮುಖ್ಯಸ್ಥರು, ಶಿಕ್ಷಕರು ಹಾಗೂ ಸಿಬ್ಬಂದಿ ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಜಾತ್ರೆಯ ಯಶಸ್ಸಿಗೆ ಸಹಕರಿಸಬೇಕು ಎಂದು ಶ್ರೀಗಳು ಕರೆ ನೀಡಿದರು.

ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ ಹಾಗೂ ಅಕ್ಷರ ಭಾರತ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಜಾತ್ರೆ ಆಯೋಜಿಸಲಾಗುತ್ತಿದೆ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಮಾತನಾಡಿ, ಕಳೆದ ಡಿಸೆಂಬರ್‌ನಲ್ಲಿ ನಡೆದ ಅಕ್ಷರ ಜಾತ್ರೆಯ ಯಶಸ್ವಿ ಅನುಭವವನ್ನು ಆಧಾರವಾಗಿಟ್ಟುಕೊಂಡು ಈ ಬಾರಿ ಇನ್ನಷ್ಟು ವ್ಯವಸ್ಥಿತವಾಗಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಆಡಳಿತಾಧಿಕಾರಿ ಡಾ.ಜಿ.ಕೆ. ಕಾಳೆ, ಉಪನ್ಯಾಸಕ ಎಫ್.ಎನ್. ಹುಡೇದ ಹಾಗೂ ಮುಖ್ಯ ಶಿಕ್ಷಕ ಎಸ್.ಎನ್. ಹೂಲಗೇರಿ ಜಾತ್ರೆಯ ವಿವಿಧ ಸಿದ್ಧತೆಗಳ ಕುರಿತು ವಿಷಯ ಮಂಡಿಸಿದರು. ಕಾರ್ಯಕ್ರಮದ ಸುವ್ಯವಸ್ಥಿತ ನಿರ್ವಹಣೆಗಾಗಿ ವಿವಿಧ ಸಮಿತಿಗಳನ್ನು ರಚಿಸಿ, ಸದಸ್ಯರಿಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಯಿತು.

ರಾಜೇಸಾಬ್ ಭಾಗವಾನ್ ಕಾರ್ಯಕ್ರಮ ನಿರೂಪಿಸಿದರು. ಕಲ್ಲಯ್ಯ ಹಿರೇಮಠ ಸ್ವಾಗತಿಸಿದರು.

ಸಭೆಯಲ್ಲಿ ಸಂಸ್ಥೆಯ ಅಂಗ ಸಂಸ್ಥೆಗಳ ಮುಖ್ಯಸ್ಥರಾದ ಪ್ರಾಚಾರ್ಯ ವೈ.ಸಿ. ಪಾಟೀಲ, ಸಾಗರ ಮಾಳಗೌಡನ್ನವರ, ಎಂ.ಬಿ. ಸಜ್ಜನ, ಪ್ರಾಂಶುಪಾಲೆ ಅನಸೂಯಾ ಪಾಟೀಲ, ಬಸವರಾಜ ಜೋಳದ, ಎ.ಪಿ. ಗಾಣಿಗೇರ, ಮಂಜುನಾಥ ಕಾಡದ, ವಸಂತರಾವ್ ಗಾರ್ಗಿ, ಬಿ.ಎಸ್. ಪಾಟೀಲ, ಎಂ.ವಿ. ವೀರಾಪುರ, ಎಂ.ಬಿ. ಕೊಪ್ಪದ, ವಿಜಯಲಕ್ಷ್ಮಿ ಜಾಧವ, ಬಿ.ಎಸ್. ಬಂಡಿಹಾಳ, ಬಿ.ಎಸ್. ಪಲ್ಲೇದ, ಬಿ.ಸಿ. ಮೇಟಿ ಹಾಗೂ ಬಸಯ್ಯ ಕಲ್ಮಠ ಸೇರಿದಂತೆ ವಿವಿಧ ಅಂಗ ಸಂಸ್ಥೆಗಳ ಶಿಕ್ಷಕರು, ಗುರುಮಾತೆಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಗುತ್ತಿಗೆ ಆಧಾರಿತ ಕಾರ್ಮಿಕ ಅಸ್ವಸ್ಥ

**ಹರಿಹರ :** ತಾಲ್ಲೂಕಿನ ಬೆಳ್ಳೂಡಿ ಸಮೀಪದ ರಿದ್ದಿ, ಸಿದ್ದಿ (ಕಾರ್ಗಿಲ್) ಕಂಪನಿಯ ಎದುರು ಧರಣಿ ಸತ್ಯಾಗ್ರಹ ಕೈಗೊಂಡ ಪ್ರತಿಭಟನಾಕಾರರ ಪೈಕಿ ಓರ್ವ ಗುತ್ತಿಗೆ ಆಧಾರಿತ ಕಾರ್ಮಿಕ ಅಸ್ವಸ್ಥಗೊಂಡ ಘಟನೆ ಸೋಮವಾರ ನಡೆಯಿತು.

ಕಂಪನಿಯಲ್ಲಿ ಗುತ್ತಿಗೆ ಆಧಾರದಲ್ಲಿದ್ದ ಕಾರ್ಮಿಕರನ್ನು ನಿಯಮಬಾಹಿರವಾಗಿ ಕೆಲಸದಿಂದ ತೆಗೆದಿರುವುದನ್ನು ಖಂಡಿಸಿ ಎಐಯುಟಿಯುಸಿ ಮುಖಂಡತ್ವದಲ್ಲಿ ಸೆ.24ರಿಂದ ಧರಣಿ ಸತ್ಯಾಗ್ರಹ ಕೈಗೊಳ್ಳಲಾಗಿದೆ.

ಸೋಮವಾರದಂದು 70ಕ್ಕೂ ಹೆಚ್ಚಿನ ಜನ ಪ್ರತಿಭಟನೆ ಕೈಗೊಂಡಿದ್ದರು, ಸಂಜೆ 4ರ ಸುಮಾರಿಗೆ ಪ್ರಕಾಶ್ ಒಲೆಕಾರ್ ಎಂಬ ಕಾರ್ಮಿಕ ಅಸ್ವಸ್ಥಗೊಂಡು ಕುಳಿತಲ್ಲೇ ಕುಸಿದು ಬಿದ್ದರು. ಆಗ ಸಹೋದ್ಯೋಗಿಗಳು ಅಂಬುಲೆನ್ಸ್ ವಾಹನವನ್ನು ಕರೆಸಿ ಅಸ್ವಸ್ಥ ಕಾರ್ಮಿಕನನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು.

ಈಚೆಗೆ ಕಂಪನಿಯ ಆಡಳಿತವನ್ನು ರಿದ್ದಿ, ಸಿದ್ದಿ ಸಂಸ್ಥೆ ಖರೀದಿಸಿದೆ. ಆಗ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದವರನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ನಿಯಮಾವಳಿ ಪ್ರಕಾರ ಪರಿಹಾರವನ್ನು ನೀಡದೆ ಕೆಲಸದಿಂದ ತೆಗೆದು ಹಾಕಿರುವುದನ್ನು ಖಂಡಿಸಿ ಧರಣಿ ಸತ್ಯಾಗ್ರಹ ಆರಂಭಿಸಲಾಯಿತು. ಧರಣಿ ಸ್ಥಳಕ್ಕೆ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲ್ಲೂಕು ಸಮಿತಿ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ ಪೂಜಾರ್ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದ್ದರು.

## ಜಕ್ಕಲಿಯಲ್ಲಿ ಜಿಯೋ ನೆಟ್‌ವರ್ಕ್ ಸಮಸ್ಯೆ; ಗ್ರಾಹಕರ ಗೋಳು

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಸಮೀಪದ ಜಕ್ಕಲಿ ಗ್ರಾಮದಲ್ಲಿ ಕಳೆದ ಹದಿನೈದು ದಿನಗಳಿಂದ ಜಿಯೋ ಮೊಬೈಲ್ ನೆಟ್‌ವರ್ಕ್ ಸಮಸ್ಯೆ ತೀವ್ರಗೊಂಡಿದ್ದು, ಹಗಲಿರುಳೆನ್ನದೆ ಕರೆ ಹಾಗೂ ಇಂಟರ್‌ನೆಟ್ ಸೇವೆ ವ್ಯತ್ಯಯವಾಗುತ್ತಿರುವುದರಿಂದ ಗ್ರಾಹಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಗ್ರಾಮದಲ್ಲಿ ಜಿಯೋ ಸಂಪರ್ಕ ಹೊಂದಿರುವ ನೂರಾರು ಗ್ರಾಹಕರು ನೆಟ್‌ವರ್ಕ್‌ಗಾಗಿ ಮೊಬೈಲ್‌ಗಳನ್ನು ಹಿಡಿದು ಮನೆಗಳಿಂದ ಹೊರಗೆ ಬಂದು, ಎತ್ತರದ ಪ್ರದೇಶ ಹಾಗೂ ರಸ್ತೆ ಬದಿಗಳಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವೊಮ್ಮೆ ಮೊಬೈಲ್‌ನಲ್ಲಿ ನೆಟ್‌ವರ್ಕ್ ತೋರಿಸಿದರೂ ಕರೆ ಸಂಪರ್ಕವಾಗದೆ, ಸಂಪರ್ಕವಾದರೂ ಧ್ವನಿ ಸ್ಪಷ್ಟವಾಗಿ ಕೇಳಿಸದಿರುವುದು ಗ್ರಾಹಕರಿಗೆ ಮತ್ತಷ್ಟು ಕಿರಿಕಿರಿ ಉಂಟುಮಾಡುತ್ತಿದೆ.

ಇಂಟರ್‌ನೆಟ್ ವೇಗವೂ ತೀರಾ ಕಡಿಮೆಯಾಗಿದ್ದು, ಆನ್‌ಲೈನ್ ವಹಿವಾಟು, ಡಿಜಿಟಲ್ ಪಾವತಿ, ಸಾಮಾಜಿಕ ಜಾಲತಾಣ, ಶಿಕ್ಷಣ ಹಾಗೂ ವಿವಿಧ ಅಗತ್ಯ ಸೇವೆಗಳಿಗೆ ಮೊಬೈಲ್ ಡೇಟಾ ಅವಲಂಬಿಸಿರುವವರು ಪರದಾಡುವಂತಾಗಿದೆ.

ವಿದ್ಯಾರ್ಥಿಗಳು, ವ್ಯಾಪಾರಸ್ಥರು, ಉದ್ಯೋಗಿಗಳು ಸೇರಿದಂತೆ ವಿವಿಧ ವರ್ಗದ ಜನರು ಮೊಬೈಲ್ ಸಂಪರ್ಕವನ್ನೇ ಅವಲಂಬಿಸಿರುವುದರಿಂದ ನೆಟ್‌ವರ್ಕ್ ಸಮಸ್ಯೆ ದಿನನಿತ್ಯದ ಕೆಲಸಗಳ ಮೇಲೂ ಪರಿಣಾಮ ಬೀರುತ್ತಿದೆ. ತುರ್ತು ಸಂದರ್ಭದಲ್ಲಿ ಕರೆ ಮಾಡಲು ಸಾಧ್ಯವಾಗದಿರುವುದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

**ಬೇರೆ ನೆಟ್‌ವರ್ಕ್‌ಗೆ ಪೋರ್ಟ್ ಆಗಲು ನಿರ್ಧಾರ:** ನೆಟ್‌ವರ್ಕ್ ಸಮಸ್ಯೆ ನಿರಂತರವಾಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಜಿಯೋ ಗ್ರಾಹಕರಲ್ಲಿ ಹಲವರು ತಮ್ಮ ಮೊಬೈಲ್ ಸಂಖ್ಯೆಯನ್ನು ಬೇರೆ ನೆಟ್‌ವರ್ಕ್‌ಗೆ ಪೋರ್ಟ್ ಮಾಡಿಸಿಕೊಳ್ಳಲು ಮುಂದಾಗಿದ್ದಾರೆ. ಸಮಸ್ಯೆ ಇದೇ ರೀತಿ ಮುಂದುವರಿದರೆ ಇನ್ನಷ್ಟು ಗ್ರಾಹಕರು ಜಿಯೋ ಸೇವೆಯಿಂದ ದೂರವಾಗುವ ಸಾಧ್ಯತೆಯಿದೆ ಎಂದು ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಯೋ ಸಂಸ್ಥೆಯ ಸಂಬಂಧಪಟ್ಟ ಅಧಿಕಾರಿಗಳು ಜಕ್ಕಲಿ ಗ್ರಾಮದ ನೆಟ್‌ವರ್ಕ್ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತಾಂತ್ರಿಕ ದೋಷವನ್ನು ಶೀಘ್ರ ಪತ್ತೆಹಚ್ಚಿ ಪರಿಹರಿಸಬೇಕು. ಗ್ರಾಮದಲ್ಲಿ ನಿರಂತರ ಹಾಗೂ ಗುಣಮಟ್ಟದ ಮೊಬೈಲ್ ಸೇವೆ ಒದಗಿಸುವ ಮೂಲಕ ಗ್ರಾಹಕರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114